**ಉ : 1943ರ ಏಪ್ರಿಲ್ 1 ರಂದು ಬೆಳಗಿನ ಸಮಯ. ಹೊಸರಿತ್ತಿಯ ಸಮೀಪದ ವೀರಭದ್ರ ದೇವಾಲಯದಲ್ಲಿ ಪೊಲೀಸರ ತುಕಡಿಯಿತ್ತು. ಅದರ ಪಕ್ಕದಲ್ಲೇ ಖಜಾನೆ. ಮಹಾದೇವ ತನ್ನ ಸಂಗಡಿಗರೊಂದಿಗೆ ಮುತ್ತಿಗೆ ಹಾಕಿದರು. ಮಹಾದೇವ ಅವರ ಧೈರ್ಯಕ್ಕೆ ಹೆದರಿ ಹಲವು ಪೊಲೀಸರು ಓಟ ಕಿತ್ತರು. ಮಹಾದೇವ ಖಜಾನೆಯ ಬೀಗ ಮುರಿಯುವುದರಲ್ಲಿ ನಿರತರಾಗಿದ್ದರು. ಅಡಗಿ ಕುಳಿತಿದ್ದ ಒಬ್ಬ ಪೊಲೀಸ್ ಮಹಾದೇವನ ಎದೆಗೆ ಗುಂಡು ಹೊಡೆದ. ಮಹಾದೇವ ರಕ್ತದ ಮಡುವಿನಲ್ಲಿ ಬಿದ್ದರು.**

**ಇ. ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.**

1. ಮಹಾದೇವ ಅವರು ಜೈಲಿನಿಂದ ಬಿಡುಗಡೆಯಾದ ಮೇಲೆ ಮಾಡಿದ ಕಾರ್ಯಗಳಾವುವು?

**ಉ : ಹಲವಾರು ಬಾರಿ ಜೈಲಿಗೆ ಹೋಗಿದ್ದರಿಂದ ದೇಹದ ಆರೋಗ್ಯದ ಬಗೆಗೆ ಅವರಿಗೆ ಕಾಳಜಿ ಉಂಟಾಯಿತು. ಶಿಸ್ತುಬದ್ಧವಾದ ವ್ಯಾಯಾಮವನ್ನು ಕಲಿಯಬೇಕೆನಿಸಿತು. ವ್ಯಾಯಾಮವನ್ನು ಕಲಿತರು. ವ್ಯಾಯಾಮ ಕಲಿಯುವಾಗಲೇ ಔಷಧಗಳ ಶಾಸ್ತ್ರವನ್ನು ಅಭ್ಯಾಸ ಮಾಡಿದರು. ಹಳ್ಳಿಗರ ಸೇವೆ ಮಾಡುವ ಉದ್ದೇಶದಿಂದ ಒಂದು ಸೇವಾಶ್ರಮವನ್ನು ಪ್ರಾರಂಭಿಸಿದರು.**

2. ಬ್ರಿಟಿಷರು ಭಾರತ ಬಿಟ್ಟು ತೊಲಗಬೇಕಾದರೆ ಏನು ಮಾಡಬೇಕೆಂದು ಮಹಾದೇವ ಯೋಚಿಸಿದರು?

**ಉ : ಬ್ರಿಟಿಷರು ಭಾರತ ಬಿಟ್ಟು ತೊಲಗಬೇಕಾದರೆ ಅವರು ನಡೆಸುತ್ತಿರುವ ಆಡಳಿತಕ್ಕೆ ಧಕ್ಕೆ ಉಂಟುಮಾಡಿ ಅವರಿಗೆ ಆಡಳಿತ ನಡೆಸುವುದು ಸಾಧ್ಯವಿಲ್ಲ ಎನಿಸಬೇಕಿತ್ತು. ಸವಣೂರು ಎಂಬಲ್ಲಿ ರೈಲು ನಿಲ್ದಾಣವನ್ನು ಬ್ರಿಟಿಷ್ ಪೊಲೀಸರಿಗೆ ಗೊತ್ತಾಗದಂತೆ ಸುಟ್ಟುಹಾಕಿದರು. ಹೊನ್ನತ್ತಿ ಎಂಬಲ್ಲಿ ಪೊಲೀಸರ ಬಂದೂಕು ಅಪಹರಿಸಿದರು. ಬಾಳೆಹೊಸೂರಿನ ಪೊಲೀಸ್ ಕೇಂದವ್ರನ್ನು ಸುಟ್ಟರು.**

3. ಹೊಸರಿತ್ತಿಯಲ್ಲಿ ನಡೆದ ಘಟನೆಗಳಾವುವು?

**ಉ : ಹಾವೇರಿ ಜಿಲ್ಲೆಯ ಹೊಸರಿತ್ತಿಯಲ್ಲಿ ಕಂದಾಯವನ್ನು ಬಲವಂತವಾಗಿ ವಸೂಲಿ ಮಾಡಿ ಜನರನ್ನು ಹಿಂಸಿಸುತ್ತಿದ್ದ ಸರಕಾರದ ಕೇಂದ್ರವಿತ್ತು. ಅದನ್ನು ಆಕ್ರಮಿಸಿಕೊಳ್ಳಬೇಕೆಂದು ನಿರ್ಧಾರವಾಯಿತು. 1943ರ ಏಪ್ರಿಲ್ 1 ರಂದು ಬೆಳಗಿನ ಸಮಯ. ಹೊಸರಿತ್ತಿಯ ಸಮೀಪದ ವೀರಭದ್ರ ದೇವಾಲಯದಲ್ಲಿ ಪೊಲೀಸರ ತುಕಡಿಯಿತ್ತು. ಅದರ ಪಕ್ಕದಲ್ಲೇ ಖಜಾನೆ. ಮಹಾದೇವ ತನ್ನ ಸಂಗಡಿಗರೊಂದಿಗೆ ಮುತ್ತಿಗೆ ಹಾಕಿದರು. ಮಹಾದೇವ ಅವರ ಧೈರ್ಯಕ್ಕೆ ಹೆದರಿ ಹಲವು ಪೊಲೀಸರು ಓಟ ಕಿತ್ತರು. ಮಹಾದೇವ ಖಜಾನೆಯ ಬೀಗ ಮುರಿಯುವುದರಲ್ಲಿ ನಿರತರಾಗಿದ್ದರು. ಅಡಗಿ ಕುಳಿತಿದ್ದ ಒಬ್ಬ ಪೊಲೀಸ್ ಮಹಾದೇವನ ಎದೆಗೆ ಗುಂಡು ಹೊಡೆದ. ಮಹಾದೇವ ರಕ್ತದ ಮಡುವಿನಲ್ಲಿ ಬಿದ್ದರು**

**ಈ. ಖಾಲಿ ಜಾಗವನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ.**

1. ಪ್ರಾಥಮಿಕ ನಂತರದ ವಿದ್ಯಾಭ್ಯಾಸಕ್ಕಾಗಿ ಮಹಾದೇವ ................. ಶಾಲೆಗೆ ಹೋದರು ? **ಉ : ಹಂಸಭಾವಿ**

2. ಮಹಾದೇವ ............................. ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರಿದರು. **ಉ : ದಂಡಿ ಸತ್ಯಾಗ್ರಹ**

3. ಹಾವೇರಿ ಜಿಲ್ಲಾ ಹೊಸರಿತ್ತಿಯಲ್ಲಿದ್ದ ಸರಕಾರದ ಕೇಂದ್ರ ........................ ವಸೂಲಿ ಮಾಡುತ್ತಿತ್ತು. **ಉ : ಕಂದಾಯ**

4. ............................... ಬಾಳು ಮೀಸಲಾಗಿಸಬೇಕು.

ಉ. ಸ್ವಾತಂತ್ರ್ಯ ಚಳುವಳಿಗೆ ಸಂಬಂಧಪಟ್ಟ ಹತ್ತು ಪದಗಳನ್ನು ಬರೆಯಿರಿ.

**ಉ : ಖಾದಿ ಬಟ್ಟೆ, ಸ್ವದೇಶಿ ಬಟ್ಟೆ, ಅಸಹಕಾರ ಚಳುವಳಿ, ದಂಡಿ ಸತ್ಯಾಗ್ರಹ, ಸಬರಮತಿ, ಮಹಾತ್ಮ ಗಾಂಧೀಜಿ, ಬ್ರಿಟಿಷರು, ಬ್ರಿಟಿಷರೇ ಭಾರತ ಬಿಟ್ಟು ತೊಲಗಿ, ಸೆರೆಮನೆ ವಾಸ, ಬಂದೂಕು.**

**ಊ. ಕೆಳಗೆ ಸೂಚಿಸಿರುವ ಊರುಗಳು ಯಾವ ಜಿಲ್ಲೆಯಲ್ಲಿವೆ ಎಂಬುದನ್ನು ಬರೆಯಿರಿ.**

1. ಮೋಟೆಬೆನ್ನೂರು : **ಹಾವೇರಿ ಜಿಲ್ಲೆ**

2. ಹೊಸರಿತ್ತಿ : **ಹಾವೇರಿ ಜಿಲ್ಲೆ**

3. ಕಲಾದಗಿ : **ವಿಜಯಪುರ**

**ಋ. ಕೆಳಗೆ ಸೂಚಿಸಿರುವ ಪದಗಳನ್ನು ಬಳಸಿ ವಾಕ್ಯಗಳನ್ನು ರಚಿಸಿ.**

1. ಸ್ವತಂತ್ರ : **ನಾವು ಇಂದು ಸ್ವತಂತ್ರ ಅನುಭವಿಸಲು ಮಹಾತ್ಮ ಗಾಂಧೀಜಿ ಪ್ರಾಣ ತೆತ್ತರು.**

2. ಆಡಳಿತ : **ಈ ದೇಶದ ಆಢಳಿತ ಮಾಡಲು ತ್ಯಾಗ, ನಿಸ್ವಾರ್ಥ ಮನೋಭಾವ ಇರಬೇಕು.**

3. ದೇಶಭಕ್ತ : **ಭಗತ್‌ಸಿಂಗ್ ಒಬ್ಬ ಮಹಾನ್ ಕ್ರಾಂತಿಕಾರಿ ದೇಶಭಕ್ತ.**

4. ಅಸಹಕಾರ : **ಅಸಹಕಾರ ಚಳುವಳಿಯಲ್ಲಿ ಅದೆಷ್ಟೋ ಭಾರತೀಯರು ಸೆರೆಮನೆ ಕಂಡರು.**

5. ಚಳುವಳಿ : ಇಂದಿಗೂ ಜನರು ಸೌಲಭ್ಯಗಳಿಗಾಘಿ ಚಳುವಳಿ ಮಾಡುತ್ತಾಋುಎ.

## ಪಾಠ 2 : ಚಗಳಿ ಇರುವೆ

### ಅ. ಕೊಟ್ಟಿರುವ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

1. ಕೊಟ್ಟೆ ಎಂದರೇನು?

**ಉ : ಎಲೆಗಳನ್ನು ಒಂದಕ್ಕೊಂದು ಸೇರಿಸಿ ಇರುವೆಗಳು ಕಟ್ಟುವ ಗೂಡುಗಳನ್ನು 'ಕೊಟ್ಟೆ' ಎನ್ನುತ್ತಾರ**

2. ಚಗಳಿ ಇರುವೆಗಳು ಎಲೆಗಳನ್ನು ಅಂಟಿಸಲು ಏನನ್ನು ಬಳಸುತ್ತವೆ? **ಉ : ಲಾರ್ವಾ**

3. ಇವು ತಮ್ಮ ಸಂಗಡಿಗರಿಗೆ ಯಾವ ರಾಸಾಯನಿಕದ ಮೂಲಕ ಸಂದೇಶಗಳನ್ನು ತಲುಪಿಸುತ್ತವೆ? **ಉ : ಫಿರಮೋನ್.**

4. ಚಗಳಿ ಇರುವೆಗಳಂತೆಯೇ ಸಂಘಜೀವನವನ್ನು ನಡೆಸುವ ಇತರ ಜೀವಿಗಳು ಯಾವುವು?

**ಉ : ಕೆಂಪು ಇರುವೆ, ಕಪ್ಪು ಇರುವೆ, ಗೊದ್ದ,**

### ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಚಗಳಿ ಇರುವೆಗಳ ಶಿಸ್ತಿಗೆ ಒಂದು ಉದಾಹರಣೆ ಕೊಡಿ. **ಉ : ಕೊಟ್ಟೆಗಳನ್ನು ರಚಿಸುವ ರೀತಿ, ಹುಳುಗಳನ್ನು ಹಿಡಿದು ತರುವುದು.**

2. ಕೆಲಸಗಾರ ಇರುವೆಗಳ ಕೆಲಸವೇನು?

**ಉ : ತಾವು ಹೊರಗಿನಿಂದ ಸಂಗ್ರಹಿಸಿ ತಂದ ಆಹಾರವನ್ನು ಕೆಲಸಗಾರ ಇರುವೆಗಳು ರಾಣಿಗೆ ತಿನ್ನಿಸುತ್ತಲೂ ಇರುತ್ತವೆ.**

3. ಚಗಳಿ ಇರುವೆಗಳನ್ನು ಹಿಮ್ಮೆಟ್ಟಿಸುವುದು ಮನುಷ್ಯರಿಗೂ ಕಷ್ಟ ಏಕೆ?

**ಉ: ಚಗಳಿ ಇರವಗೆಳನ್ನು ಹಿಡಿಯಲು ಹೋದರೆ ಅವು ಓಡುವುದಿಲ್ಲ. ಬದಲಿಗೆ ತಿರುಗಿ ನಿಂತು ನೆಗೆದು ಕಚ್ಚಲು ಸಿದ್ಧವಾಗುತ್ತವೆ. ಅಷ್ಟೇ ಅಲದ್ಲ ತಿನ್ನ ಹಿಂಭಾಗವನ್ನು ಮೇಲತ್ತಿ ಹೊಟ್ಟೆ ಅಡಿಯಲಿರ್ಲುವ ಗ್ರಂಥಿಗಳಿಂದ ಅಪಾಯದ ಫಿರಮೋನ್ ರಾಸಾಯನಿಕವನ್ನು ಗಾಳಿಯಲ್ಲಿ ಸಿಂಪರಿಸುತ್ತವೆ.**

### ಇ. ಕೊಟ್ಟಿರುವ ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ.

1. ಚಗಳಿ ಇರುವೆಗಳು ತಮ್ಮ ಗೂಡನ್ನು ಹೇಗೆ ನಿರ್ಮಿಸುತ್ತವೆ?

**ಉ : ಯಾವ ಎಲೆಗಳನ್ನು ಬಗ್ಗಿಸಬೇಕಾಗಿದೇಯೋ ಆ ಎಲೆಯ ಮೇಲೆ ನೂರಾರು ಇರುವೆಗಳು ಜಮಾಯಿಸುತ್ತವೆ. ಅನಂತರ ಒಂದರ ಕಾಲು ಒಂದು ಹಿಡಿದುಕೊಂಡು ಜೋತಾಡುತ್ತಾ ಕೆಳಗಿಳಿಯುತ್ತವೆ. ಕೆಳಗಿನ ಎಲೆಯ ಅಂಚು ಸಿಕ್ಕಿದ ಕೂಡಲೆ ನೇತಾಡುವ ದಾರದ ಕೊನೆಯಲ್ಲಿರುವ ಇರುವೆ ಎಲೆಯ ಅಂಚನ್ನು ಹಿಡಿಯುತ್ತದೆ. ಮೇಲಿನಿಂದ ಕೆಳಗೆ ನೇತುಕೊಂಡಿರುವ ಹಲವಾರು ದಾರಗಳು ನಿರ್ಮಾಣವಾದ ಕೂಡಲೇ ನೀಡಿರುವ ತಮ್ಮ ಕೈ ಕಾಲುಗಳನ್ನು ಎಲ್ಲ ಇರುವೆಗಳೂ ನಿಧಾನವಾಗಿ ಮಡಚುತ್ತವೆ. ದಾರದ ಸೆಳೆತಕ್ಕೆ ಎಲೆ ಮೆಲ್ಲಗೆ ಕೆಳಗೆ ಬಾಗುತ್ತದೆ. ಮೊದಲ ಇರುವೆಗಳ ದಾರ ಸಂಕುಚಿಸಿ ಎಲೆ ಕೆಳಕ್ಕೆ ಬಾಗಿರಬೇಕಾದರೆ ಮತ್ತೆ ಎರಡನೇ ಸುತ್ತಿನ ಇರುವೆಗಳ ದಾರ ನಿರ್ಮಾಣವಾಗುತ್ತದೆ. ಮೊದಲನೆಯ ಸರಣಿ ಎಳೆಸು ಹಿಡಿದಿರುವ ಎಲೆಯಿಂದ ಮತ್ತೊಂದು ಸುತ್ತಿನ ದಾರಗಳು ಬಂದು ಎಲೆಯನ್ನು ಮತ್ತಷ್ಟು ಕೆಳಗೆ ಎಳೆಯುತ್ತವೆ. ಕೆಲಹೊತ್ತಿನಲ್ಲೇ ಆ ಎಲೆಯನ್ನು ಪೊಟ್ಟಣದಂತೆ ಬಗ್ಗಿಸಿ ಕೆಳಗಿನ ಎಲೆಗೆ ಒತ್ತಿ ಹಿಡಿಯುತ್ತವೆ.**

2. ಚಗಳಿ ಇರುವೆಗಳು ಉಪಕಾರಿಗಳೂ ಹೌದು ಉಪದ್ರವಕಾರಿಗಳೂ ಹೌದು. ಈ ಹೇಳಿಕೆಯನ್ನು ವಿವರಿಸಿ

**ಉ : *ಉಪಕಾರಿ :* ತಮ್ಮಲ್ಲೇ ದನ ಸಾಕುವ ಗೋಪಾಲಕರಂಥ ಕೆಲಸಗಾರತಿರುವೆಗಳ ಕೆಲಸವೆಂದರೆ ರೈತರು ಬೆಳೆಯುವ ಹೊಲದ ಗಿಡದ ರಸ ಹೀರಿ ಬದುಕುವ ತಿಗಣೆ ಮತ್ತು ಜಿಗಿ ಹುಳುಗಳನ್ನು ಹಿಡಿತಂದು ತಾವು ಕೊಟ್ಟೆ ಕಟ್ಟಿದ ಮರದ ಕೊಂಬೆಗಳ ಮೇಲೆ ಸಾಕುವುದು. ಕೀಟಗಳನ್ನು ಚಗಳಿ ಇರುವೆಗಳು ಸಾಕುತ್ತವೆ. ಇದರಿಂದಾಗಿ ಚಗಳಿ ಇರುವೆಗಳು ಲಕ್ಷಾಂತರ ಕೀಟಗಳನ್ನು ಹಿಡಿದು ಕೊಂದು ರೈತರಿಗೆ ಸಹಾಯ ಮಾಡುತ್ತವೆ.**

***ಉಪದ್ರವ :*  ಜಿಗಿ ಹುಳುಗಳನ್ನೂ ತಿಗಣೆಗಳನ್ನೂ ಇವು ಗೂಡು ಮಾಡಿರುವ ಮರಗಿಡಗಳಲ್ಲೆಲ್ಲ ತಂದಿಟ್ಟು ಸಾಕುವುದರಿಂದ ಈ ಉಪದ್ರವಕಾರಿ ಕೀಟಗಳನ್ನು ಗಿಡದಿಂದ ಗಿಡಕ್ಕೆ ಹಬ್ಬಿಸಿ ಸಾಕುವ ವಾಹಕಗಳಾಗಿವೆ.**

3. ಕಷ್ಟಕ್ಕೆ ಹೆದರಿ ಓಡಬಾರದು, ತಿರುಗಿ ನಿಂತು ಎದುರಿಸಬೇಕೆಂಬ ಸಂದೇಶವನ್ನು ನಾವು ಇರುವ ಜೀವನದಿಂದ ಹೇಗೆ ಕಲಿಯಬಹುದು?

**ಉ: ಚಗಳಿ ಇರುವೆಗಳನ್ನು ಹಿಡಿಯಲು ಹೋದರೆ ಅವು ಓಡುವುದಿಲ್ಲ. ಬದಲಿಗೆ ತಿರುಗಿ ನಿಂತು ನೆಗೆದು ಕಚ್ಚಲು ಸಿದ್ಧವಾಗುತ್ತವೆ. ಅಷ್ಟೇ ಅಲ್ಲದೇ ತನ್ನ ಹಿಂಭಾಗವನ್ನು ಮೇಲೆತ್ತಿ ಹೊಟ್ಟೆ ಅಡಿಯಲ್ಲಿರುವ ಗ್ರಂಥಿಗಳಿಂದ ಫಿರಮೋನ್ ರಾಸಾಯನಿಕವನ್ನು ಗಾಳಿಯಲ್ಲಿ ಸಿಂಪರಿಸುತ್ತವೆ. ಕೆಲವೇ ಕ್ಷಣಗಳಲ್ಲಿ ಆಜುಬಾಜಿನಲ್ಲಿರುವ ಎಲ್ಲ ಚಗಳಿ ಇರುವೆಗಳೂ ಯುದ್ಧ ಸನ್ನದ್ಧರಾಗಿ ಹಾಜರಾಗುತ್ತವೆ.**

**ಈ. ಖಾಲಿ ಜಾಗವನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ.**

1. ಚಗಳಿ ಇರುವೆಗಳಿಗೆ ಮೂಲ ............. ಇರುವೆ. **ಉ : ರಾಣಿ**

2. ದನ ಸಾಕುವ ಗೋಪಾಲಕರನ್ನು ಹೋಲುವ ಇರುವೆಗಳು........................ **ಉ : ಕೆಲಸಗಾರ ಇರುವೆಗಳು**

3. ಚಗಳಿ ಇರುವೆಗಳ ಗೂಡನ್ನು ...................... ಎಂದು ಕರೆಯುತ್ತಾರೆ. **ಉ : ಕೊಟ್ಟೆ**

4. ಒಂದು ಚಗಳಿ ಇರುವೆ ಗೂಡಿನಲ್ಲಿ ಸುಮಾರು ..................... ಇರುವೆಗಳು ಇರುತ್ತವೆ. 5 ರಿಂದ 10 ಲಕ್ಷ

5. ಇರುವೆಗಳಿಂದ ಒಸರುವ ರಾಸಾಯನಿಕ ........................... **ಉ : ಫಿರಮೋನ್**

## ಪಾಠ 7 : ಬಿಲ್ಲಹಬ್ಬ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ಕೃಷ್ಣ ಯಾರ ಸೊಂಟವನ್ನು ಮುರಿದ? **ಉ : ಶಕಟ**

2. ಕೃಷ್ಣನ ಕೈಯಲ್ಲಿ ಸಿಕ್ಕ ಧೇನುಕ ಏನಾದ? **ಉ: ಬೇಲದ ಹಣ್ಣು ಬಡಿಯೋ ಬಡಿಗೆಯಾದ**

3. ಮಂತ್ರಿ ಕಂಸನ ಬಳಿಗೆ ಕರೆತಂದ ಇಬ್ಬರು ಯಾರು? **ಉ : ಶೈಲಿಕ ಮತ್ತು ದುರ್ವಿಧ**

4. ವಸುದೇವನಿಗೆ ಮಕ್ಕಳ ವಿಚಾರ ಹೇಳಿದವರು ಯಾರು?

5. ವಸುದೇವ ಹೇಳುವಂತೆ ರಾಜಕಾರ್ಯ ಹೇಗಿರುತ್ತದೆ?

**ಉ : ಹತ್ತು ಜನರ ಮಧ್ಯೆ ಕೂತಾಗ ಜೋಲಿ. . ಏಕಾಂಗಿ ಇದ್ದಾಗ ಒತ್ತಿದರೂ ಮುಚ್ಚದ ರೆಪ್ಪೆ. . . !**

6. ನಂದ ಯಾರೆಂದು ಕಂಸ ಹೇಳುತ್ತಾನೆ?

**ಉ : ಗೋಕುಲದ ಗೊಲ್ಲರ ಹುಡುಗ ಪಿಳ್ಳಂಗೋವಿ ಕೃಷ್ಣ.**

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ಕೃಷ್ಣ ಯಾರು ಯಾರನ್ನು ಕೊಂದ?

**ಉ : ಹಾಲು ಕೊಡಲು ಹೋದ ಪೂತನಿಯ ರಕ್ತ ಹೀರಿದನಂತೆ...... ! ಸವಾರಿ ಮಾಡು ಅಂತ ಬೆನ್ನೊಡ್ಡಿದರೆ ಶಕಟನ ಸೊಂಟಾನೆ ಮುರಿದ. ಅವನ ಕೈಲ್ಲಿ ತೃಣಾವರ್ತ ಆಟದ ಬುಗುರಿಯಾಗಿ ಹೋದ. ಧೇನುಕ ಬೇಲದ ಹಣ್ಣು ಬಡಿಯೋ ಬಡಿಗೆಯಾದ.. .. ..**

2. ಕ್ರೀಡಾಗಾರದಲ್ಲಿ ಆಗಿದ್ದ ಗುಪ್ತ ಏರ್ಪಾಡು ಏನು?

**ಉ : .ಬಾಗಿಲವಾಡದ ಕಮಾನಿಗೆ ಕಿರುಗತ್ತಿ ಅಲಂಕಾರ .. ಬಾಗಿಲವಾಡದ ಕಮಾನಿನ ಮೇಲೆ ಗಾಜಿನ ರಾಜಗೋಪುರ.. ... ಅದೇನಾದ್ರೂ ತಲೇ ಮೇಲೆ ಬಿತ್ತು ಅಂದ್ರೆ.. .. ..ಶ್ರೀಮದ್ ರಮಾರಮಣ ಗೋವಿಂದಾ ಗೋವಿಂದ.**

3. ವಸುದೇವ ಮಕ್ಕಳನ್ನು ನೆನೆದು ವ್ಯಥೆಪಟ್ಟ ಬಗೆ ಹೇಗೆ?

**ಉ : .ಮಕ್ಕಳನ್ನು ಆಡಿಸಲಿಲ್ಲ. . .ಆರೈಕೆ ಮಾಡಲಿಲ್ಲ. . . ತೊದಲು ನುಡಿ ಕೇಳಲಿಲ್ಲ. . ತೂಗಲಿಲ್ಲ. . . ಜೋಗುಳ ಹಾಡಲಿಲ್ಲ. .**

4. ಕಂಸ ತಂಗಿಯ ಮೇಲಿನ ಪ್ರೀತಿ ಎಂಥದ್ದೆಂದು ಹೇಳಿಕೊಂಡಿದ್ದಾನೆ?

**ಉ : ಸಂಕೋಲೆ ಹಾಕ್ಸಿದೀನಿ ನಿಜ. . .ಆದ್ರೆ ನೂರಕ್ಕೆ ನೂರು ಶುದ್ಧ**

**ಅಪರಂಜೀದು. . . ! ಕೊರಳಿಗೆ ಮೂರೆಳೆ ಕೈಗೆ ಎರಡೆಳೆ ಕಾಲಿಗೆ ಒಂದೆಳೆ–ಎಲ್ಲಾ ಚಿನ್ನದ್ದೇ. . .ಇಪ್ಪತ್ತೈದು ವರ್ಷ ಆಯ್ತು ಮಾಡ್ಸಿ. ಸ್ವಲ್ಪ ಆದ್ರೂ ಕ್ಷಾಗಿದೆಯಾ ? ಅದು ಪ್ರೀತಿ ಅಂದ್ರೆ.**

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು–ಐದು ವಾಕ್ಯಗಳಲ್ಲಿ ಉತ್ತರಿಸಿ.**

1. ಗೂಢಚಾರರು ಯಾವುದರ ಬಗ್ಗೆ ಶೋಧನೆ ಮಾಡುತ್ತಿದ್ದಾರೆ? ವಿವರಿಸಿ.

2. ಕೃಷ್ಣನನ್ನು ಕೊಲ್ಲಲು ದುರ್ವಿಧ–ಶೈಲಿಕರು ಮಾಡಿದ್ದ ಏರ್ಪಾಡುಗಳೇನು?

3. ಕಂಸ ದೇವಕಿಯಿಂದ ಕೃಷ್ಣನ ಬಗ್ಗೆ ತಿಳಿಯಲು ಹೋಗಿ ನಿರಾಶನಾದದ್ದು ಹೇಗೆ?

**ಈ. ಈ ವಾಕ್ಯಗಳನ್ನು ಹೇಳಿಕೆಗಳನ್ನು ಯಾರು ಯಾರಿಗೆ ಯಾವಾಗ ಹೇಳಿದರು/ತಿಳಿಸಿರಿ?**

1. "ಹೌದು ಒಡೆಯ –– ಕ್ರೀಡಾಂಗಣಕ್ಕೆ ಇರೋದು ಒಂದೇ ಹೆಬ್ಬಾಗಿಲು"

**ಉ : "ಈ ವಾಕ್ಯವನ್ನು 'ಬಿಲ್ಲ ಹಬ್ಬ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.**

**ಯಾರು : ಮಂತ್ರಿ , ಯಾರಿಗೆ : ಕಂಸನಿಗೆ**

**ಸಂಧರ್ಭ : ಕೃಷ್ಣನನನು ಕೊಲ್ಲಲು ಕ್ರೀಡಾಂಗಣದಲ್ಲಿ ಏರ್ಪಾಡು ಮಾಡಿದಾಗ.**

2. "ಮಂಡೇಲಿ ಕೊಂಚ ಮಾಂಸ ಇರಬೇಕು"

**ಉ : "ಈ ವಾಕ್ಯವನ್ನು 'ಬಿಲ್ಲ ಹಬ್ಬ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.**

**ಯಾರು : ಕಂಸ , ಯಾರಿಗೆ : ಮಂತ್ರಿಗೆ**

**ಸಂಧರ್ಭ : ಕಂಸ ಮಂತ್ರಿಗೆ ಕುಳಿತಿಕೊಳ್ಳಲು ಬಾ ಅಂದಾಗ ಮಂತ್ರಿ ಇರ್ಲಿ ಬುದ್ಧಿ ಅಂದಾಗ.**

3. "ನಿಮ್ಮ ಅಣ್ಣನಿಗೆ ಸ್ವಲ್ಪ ಹಾಲಾದರೂ ಕೊಡು"

**: "ಈ ವಾಕ್ಯವನ್ನು 'ಬಿಲ್ಲ ಹಬ್ಬ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.**

**ಯಾರು : ವಸುದೇವ , ಯಾರಿಗೆ : ದೇವಕಿಗೆ**

**ಸಂಧರ್ಭ : ಕಂಸ ವಸುದೇವನ ಮನೆಗೆ ಹೋದಾಗ..**

4. "ಕೊಲ್ಲಲು ಬಂದವರನ್ನೆಲ್ಲಾ ಅವನೇ ಕೊಂದುಬಿಟ್ಟ"

**: "ಈ ವಾಕ್ಯವನ್ನು 'ಬಿಲ್ಲ ಹಬ್ಬ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.**

**ಯಾರು : ಕಂಸ, ಯಾರಿಗೆ : ದೇವಕಿಗೆ**

**ಸಂಧರ್ಭ : ಕೃಷ್ಣನನನು ಕೊಲ್ಲಲು ಅವನ ಬಗ್ಗೆ ದೇವಕಿಗೆ ಕೇಳಿದಾಗ.**

**ಉ. ಹೊಂದಿಸಿ ಬರೆಯಿರಿ.**

| | |
|---|---|
| 1. ಒಡೆಯ | ಕುವಲಯಾಪೀಡ 4 |
| 2. ಶಿಲ್ಪಿ | ಶಕಟ 3 |
| 3. ವೈದ್ಯ | ಗೋವರ್ಧನ 5 |
| 4. ಆನೆ | ದುರ್ವಿಧ 3 |
| 5. ಬೆಟ್ಟ | ಶೈಲಿಕ 2 |
| | ಧೇನುಕ |
| | ಕಂಸ 1 |

**ಊ. ಕೆಳಗೆ ಕೊಟ್ಟಿರುವ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿ, ವಾಕ್ಯ ರಚಿಸಿ.**

1. ಲೋಕಾಭಿರಾಮ : = ಸಹಜವಾಗಿ **"ನಾವು ನಮ್ಮ ಸ್ನೇಹಿತರ ಜೊತೆಲೋಕಾಭಿರಾಮವಾಗಿ ಮಾತನಾಡುತ್ತೇವೆ."**

2. ಪರಾಂಬರಿಸು : = ಗಮನಿಸು **"ಬೇರೆಯವರ ತಪ್ಪುಗಳನ್ನು ನಾವು ಸೂಕ್ಷ್ಮವಾಘಿ ಪರಾಂಬರಿಸುತ್ತೇವೆ."**

3. ಅಪರಂಜಿ : = ಬಂಗಾರ **"ನನ್ನ ಸ್ನೇಹಿತರ ಗುಣ ಅಪರಂಜಿಯಂತಿದೆ.**

**4. ಸೆರೆಮನೆ : = ಜೈಲು** "ಸ್ವಾತಂತ್ರ್ಯ ಹೋರಾಟದಲ್ಲಿ ಬಹಳ ಜನ ಸೆರೆಮನೆ ಕಂಡರು."

5. ಸಂಕೋಲೆ : ಬಂಧನ **"ಬೇರೆಯವರ ಸಂಕೋಲೆಯಲ್ಲಿ ನಾವು ಸಿಕ್ಕಿ ಹಾಕಿಕೊಳ್ಳಬಾರದು."**

6. ಬೊಗಳೆ : = ಕೆಲಸಕ್ಕೆ ಬಾರದ ಮಾತು. **"ನಾವು ಅಮೂಲ್ಯವಾದ ಸಮಯನ್ನು ಬೆಗಳಯಲ್ಲಿ ಕಳೆಯಬಾರದು."**

## ಪಾಠ 8 : ಸಂಕ್ರಾಂತಿಯಂದು ಸುಖ ದುಃಖ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

1. ಸಂಕ್ರಾಂತಿ ಯಾವ ರೀತಿಯ ಹಬ್ಬ?

**ಉ : ಪುರಾಣ ಕಾಣಿಸುತ್ತದೆ. ವಿಜ್ಞಾನ ಇಣುಕು ಹಾಕುತ್ತದೆ. ಸಂಪ್ರದಾಯ ಮಾತಾಡುತ್ತದೆ. ಕೃತಜ್ಞತಾಭಾವ ಕೈಹಿಡಿಯುತ್ತದೆ.**

2. ಕಿಚ್ಚು ಹಾಯಿಸುವುದು ಎಂದರೆ ಏನು?

**ಉ : ದನಕರುಗಳನ್ನು ಬೆಂಕಿಯಲ್ಲಿ ಜಿಗಿಸುವುದು**

3. ಹಳ್ಳಿಗಳಲ್ಲಿ ಪಟೇಲರು ಏನು ಕೊಡಿಸಿ ರಾಜಿ ಮಾಡುತ್ತಿದ್ದರು? **ಉ : ಎಳ್ಳು ಬೆಲ್ಲ**

4. ಕೃಷಿಕರ ಮನೆಯಲ್ಲಿ ದನಕರುಗಳ ಜಾಗಕ್ಕೆ ಏನು ಬಂದು ನಿಂತಿದೆ? **ಉ : ಟ್ರಾಕ್ಟರ್‌ಗಳು ಬಂದುನಿಂತಿವ**

5. ನಮ್ಮ ಸಂಕ್ರಾಂತಿಯಲ್ಲಿ ಏನು ಇರಬೇಕು?

**ಉ : ಸಂಸ್ಕೃತಿ ಇರಬೇಕು. ಸಂಪ್ರದಾಯ ಇರಬೇಕು, ಪ್ರೀತಿ ಇರಬೇಕು. ವಿಶ್ವಾಸ-ಕೃತಜ್ಞತೆ ಜತೆಯಾಗಬೇಕು**

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ಸಂಕ್ರಾಂತಿಯಲ್ಲಿ ದನಗಳಿಗೆ ಏನು ಮಾಡಲಾಗುತ್ತದೆ?

**ಉ : ದನ-ಕರುಗಳ ಮೈ ತೊಳೆದು, ಕೊರಳಿಗೆ ಗೆಜ್ಜೆ ಕಟ್ಟಿ ಕೊಂಬಿಗೆ ಬಣ್ಣ ಬಳಿದು, ಟೇಪು ಕಟ್ಟಿ, ಹೂ ಮುಡಿಸಿ, ತರಹೇವಾರಿ ಬಲೂನು ಕಟ್ಟಿ ಕುಣಿಯುತ್ತಿದ್ದರು.**

2. ಸಂಕ್ರಾಂತಿಯಲ್ಲಿ ಎಳ್ಳು, ಬೆಲ್ಲ, ಕೊಬ್ಬರಿ ಏಕೆ ತಿನ್ನಬೇಕು?

**ಉ : ಸಂಕ್ರಾಂತಿಯಂದು ಎಳ್ಳು-ಬೆಲ್ಲ-ಕಡಲೆ ಮತ್ತು ಕೊಬ್ಬರಿಯನ್ನೇ ಯಾಕೆ ತಿನ್ನಬೇಕು ಅಂದರೆ, ಚಳಿಗಾಲದ ಅವಧಿಯಲ್ಲಿ ಚರ್ಮ ಒಡೆದಿರ್‍ತದಲ್ಲ? ಆಗ ದೇಹದಲ್ಲಿ ಕೊಬ್ಬಿನ ಅಂಶ ಕಡಿಮೆಯಾಗುತ್ತೆ ಚರ್ಮ ಮತ್ತೆ ಹುರುಪುಗೊಳ್ಳಬೇಕಾದರೆ, ಕಳೆದುಹೋದ ಕೊಬ್ಬಿನ ಅಂಶ ಬೇಗನೆ ಸಿಗಲೇಬೇಕು. ಎಳ್ಳು-ಕೊಬ್ಬರಿ-ಕಡಲೆಯಲ್ಲಿ ಕೊಬ್ಬಿನ ಅಂಶ ವಿಪರೀತ ಎಂಬಷ್ಟಿದೆ.**

3. ಸಂಕ್ರಾಂತಿಯ ದಿನದಿಂದ ಸೂರ್ಯನ ಚಲನೆ ಹೇಗಿರುತ್ತದೆ?

**ಉ : ಸಂಕ್ರಾಂತಿ ದಿನದಿಂದ ಸೂರ್ಯನು ದಕ್ಷಿಣದಿಂದ ಉತ್ತರ ದಿಕ್ಕಿಗೆ ಸ್ವಲ್ಪ ಸ್ವಲ್ಪ ಸಂಚರಿಸಲು ಶುರುವಿಡುತ್ತಾನೆ. ಸಂಕ್ರಾಂತಿಯ ಮರುದಿನದಿಂದಲೇ ಹಗಲು ದೀರ್ಘವಾಗುತ್ತದೆ. ರಾತ್ರಿಯ ಅವಧಿ ಸಹಜವಾಗಿಯೇ ಕಡಿಮೆಯಾಗುತ್ತದೆ.**

4. ಎಳ್ಳು-ಬೆಲ್ಲ ನೀಡುವುದು ಇಂದಿನ ಕಾಲದಲ್ಲಿ ಹೇಗಿದೆ?

**ಉ : ಆದರೆ ಅದೀಗ ಪ್ರತಿಷ್ಠೆಯ ವಿಚಾರವಾಗಿದೆ. ಜಾಸ್ತಿ-ಎಳ್ಳು ಬೆಲ್ಲ ಕೊಟ್ಟವರೇ ಶ್ರೀಮಂತರು ಎಂಬಂತಾಗಿದೆ! ನಾನೇ ಮೇಲು, ನಾನೇ ಶ್ರೇಷ್ಠ ಎಂದು ತೋರಿಸಿಕೊಳ್ಳಲು ಎಲ್ಲರೂ ಮುಂದಾಗಿದ್ದಾರೆ. ದೊಡ್ಡದಾಗಿ ಕಾಣಲೆಂದು ದಪ್ಪ ದಪ್ಪ ಸಕ್ಕರೆ ಅಚ್ಚು ಸೇರಿಸಿ ಎಳ್ಳು-ಬೆಲ್ಲ ಪ್ಯಾಕ್ ಮಾಡುತ್ತಿದ್ದಾರೆ. ರೆಡಿಮೇಡ್ ಎಳ್ಳು ಬೆಲ್ಲದ ಪ್ಯಾಕ್‌ಗಳು ಫ್ಯಾಬ್ ಮಾಲ್‌ಗಳಲ್ಲಿ ಧಾರಾಳವಾಗಿ ದೊರಕುತ್ತಿವೆ. ಕಳಪೆ ಮಾಲು ಎಂಬುದು ಎಳ್ಳು-ಬೆಲ್ಲದ ರೂಪದಲ್ಲೂ ಮಾರುಕಟ್ಟೆಗೆ ಬಂದಿದೆ.**

**ಇ. ಹೊಂದಿಸಿ ಬರೆಯಿರಿ.**

| | |
|---|---|
| ಯುಗಾದಿ | ಎಳ್ಳು-ಬೆಲ್ಲ 6 |
| ದೀಪಾವಳಿ | ದಸರಾ 5 |
| ರಂಜಾನ್ | ಯೇಸು ಹುಟ್ಟಿದ ದಿನ 4 |
| ಕ್ರಿಸ್‌ಮಸ್ | ಬೇವು-ಬೆಲ್ಲ 1 |
| ವಿಜಯದಶಮಿ | ಬೆಳಕಿನ ಹಬ್ಬ 2 |
| ಮಕರ ಸಂಕ್ರಾಂತಿ | ಉಪವಾಸದ ಪರ್ವದಿನ 3 |

**ಈ. ಕೆಳಗೆ ನೀಡಿರುವ ಪಟ್ಟಿಯಲ್ಲಿ ರಾಷ್ಟ್ರೀಯ/ನಾಡ ಹಬ್ಬಗಳ ಮಹತ್ವವನ್ನು ಐದು–ಆರು ವಾಕ್ಯಗಳಲ್ಲಿ ತಿಳಿಸಿ.**

1. ಸ್ವಾತಂತ್ರ್ಯೋತ್ಸವ
2. ಗಣರಾಜ್ಯದಿನ
3. ಕನ್ನಡ ರಾಜ್ಯೋತ್ಸವ

## ಪದ್ಯ ಪಾಠ 5 : ಹಚ್ಚೇವು ಕನ್ನಡದ ದೀಪ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಕನ್ನಡದ ಕಂಪನ್ನು ಸೂಸುವಲ್ಲಿ ಏನನ್ನು ಚಾಚುತ್ತೇವೆ? **ಉ : ಕರಣ**

2. ಕಲ್ಪನೆಯ ಕಣ್ಣು ಹರಿವ ತನಕ ಯಾವ ದೀಪಗಳನ್ನು ಹಚ್ಚುತ್ತೇವೆ? **ಉ : ಪ್ರೀತಿಯ**

3. ನಮ್ಮವರು ಗಳಿಸಿದ ಹೆಸರುಳಿಸಲು ಎಲ್ಲರೂ ಏನು ಮಾಡುತ್ತೇವೆ? **ಉ : ಎಲ್ಲಾರು ಒಂದುಗೂಡುತ್ತೇವೆ.**

4. ನಮ್ಮುಸಿರು ತೀಡುವ ನಾಡಿನಲ್ಲಿ ಯಾವ ಗೀತೆ ಹಾಡುತ್ತೇವೆ? **ಉ : ಮಾಂಗಲ್ಯ ಗೀತೆ**

5. ಕರುಳೆಂಬ ಕುಡಿಗೆ ಏನನ್ನು ಮುಡಿಸುತ್ತೇವೆ? **ಉ : ಮಿಂಚನ್ನು**

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯದಲ್ಲಿ ಉತ್ತರಿಸಿ.**

1. ಕನ್ನಡಿಗರು ಯಾವ ದೀಪವನ್ನು ಹಚ್ಚುತ್ತಾರೆ?

**ಉ : ಒಲವೆತ್ತಿ ತೋರುವ ದೀಪವನ್ನು ಹಚ್ಚುತ್ತಾರೆ.**

2. ಏನನ್ನು ಮರೆತು, ಏನನ್ನು ಎರೆದು, ಹೇಗೆ ಕನ್ನಡದ ದೀಪ ಹಚ್ಚುತ್ತಾರೆ?

**ಉ :ಮರೆವನ್ನು ಮರೆತು, ಒಲವನ್ನು ಎರೆದು ಮನವನ್ನು ತೆರದು ನರನರವನೆಲ್ಲಾ ಹುರಿಗೊಳಿಸಿ ಹೊಸೆದು ಕನ್ನಡದ ದೀಪ ಹಚ್ಚುತ್ತಾರೆ.**

3. ಕನ್ನಡ ಮಾತೆಯನ್ನು ಹೇಗೆ ಆದರಿಸುತ್ತಾರೆ?

ಕಲ್ಪನೆಯ ಕಣ್ಣು ಹರಿವನಕ ಸಾಲು ದೀಪಗಳ ಬೆಳಕ ಬೀರೇವು ಹಚ್ಚಿರುವ ದೀಪದಲಿ ತಾಯ ರೂಪ ಅಚ್ಚಳಿಯದಂತೆ ತೋರೇವು

**ಇ. ಕೆಳಗಿನ ಸಾಲುಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ.**

1. ಮೈಮರೆವೆಯಿಂದ ಕೂಡಿರುವ .......................... **ಉ : ಕೂಡಿರುವ ಕೊಳೆಯ ಕೊಚ್ಚೇವೆ.**

2. ಹಚ್ಚಿರುವ ದೀಪದಲಿ ತಾಯರೂಪ .......................... **ಉ : ಅಚ್ಚಳಿಯದಂತೆ ತೋರೇವು.**

3. ನಮ್ಮೆದೆಯ ಮಿಡಿಯುವೀ ಮಾತಿನಲ್ಲಿ ಮಾತೆಯನು ........................ **ಉ : ಪೂಜೆ ಮಾಡೇವು.**

4. ಕರುಳೆಂಬ ಕುಡಿಗೆ ............................... **ಉ : ಮಿಂಚನ್ನೇ ಮುಡಸಿಸ ಹಚ್ಚೇವು ಕನ್ನಡದ ದೀಪ.**

**ಈ. 'ಹಚ್ಚೇವು' ಎಂಬ ಪದಕ್ಕೆ ಸರಿಹೊಂದುವ, ಪದ್ಯದಲ್ಲಿ ಇರುವ ಪ್ರಾಸಪದಗಳನ್ನು ಬರೆಯಿರಿ.**

**ಉ : ಕೊಚ್ಚೇವು, ಚಾಚೇವು, ಕೆಚ್ಚೇವು.**

**ಉ. 'ಬೀರೇವು' ಎಂಬ ಪದದಂತೆ ಪದಮಧ್ಯದಲ್ಲಿ 'ರ' ಅಕ್ಷರ ಬರುವ ಪದಗಳನ್ನು ಪಟ್ಟಿ ಮಾಡಿ.**

**ಉ : ತೋರೇವು, ತೂರೇವು, ಸಾರೇವು, ಮಾರೇವು.**

**ಊ. ಈ ಪದ್ಯದಲ್ಲಿ ಬರುವ ಪ್ರಾಸ ಪದಗಳನ್ನು ಪಟ್ಟಿಮಾಡಿ.**

ಕೈಗೆ ಕಾಲ್ಗೆ ಮೊಳೆಯ ಜಡಿಯೆ

ಶಿಲುಬೆಗಿಕ್ಕಿ ಸಾಯೆ ಬಡಿಯೆ

ಅವರ ತಪ್ಪ ಕ್ಷಮಿಸುಯೆಂದು

ಮೊರೆಯನಿಟ್ಟ ತಂದೆಗೆಂದು

ಕ್ರಿಸ್ತ ಸತ್ತು ಬದುಕಿದ ಯುಗವೊಂದನು ತೊಡಗಿದ– ಕಯ್ಯಾರ ಕಿಞ್ಞಣ್ಣ ರೈ (ಶತಮಾನದ ಗಾನ)

**ಉ : ಜಡಿಯೆ – ಬಡಿಯೆ,**

**ಕ್ಷಿಸುಯೆಂದು – ತಂದೆಗೆಂದು,**

**ಬದುಕಿದ –ತೊಡಗಿದ**

## ಭಾಷಾಭ್ಯಾಸ

**ಅ. ಕೆಳಗೆ ನೀಡಿರುವ ಪದ್ಯದ ಪ್ರಾಸಪದಗಳನ್ನು ಜೋಡಿಸಿ ಬರೆಯಿರಿ.**

| | | | | | |
|---|---|---|---|---|---|
| ದೀಪ | ಮರುಳು | ತೀಡು | ಭೀತಿ | ಹಾಡು | ಮನವ |
| ಹಚ್ಚು | ರೂಪ | ಕರುಳು | ಪಡೆ | ಮನೆ | ಮಿಡಿ |
| ಗೂಡು | ನಾಡು | ಮರೆತೇವು | ನಾಡು | ಗಡಿನಾಡು | ಸಿಡಿ |
| ಪ್ರೀತಿ | ನೀತಿ | ಮನ | ಕುಡಿ | ಇರುಳು | ಸೊಂಪು |
| ಅಚ್ಚು | ತೊಡೆ | ಮುಡಿ | ಹಿಡಿ | ಮರೆವ | ತೊರೆದೇವು |
| ಮಿಡಿ | ಕೆಚ್ಚು | ಗಳಿಸು | ಕಂಪು | ನಡುನಾಡು | |

**ಉ : ದೀಪ –ರೂಪ, ಮರುಳು – ಕರುಳು, ಇರುಳು. ತೀಡು– ಹಾಡು, ಗೂಡು, ನಾಡು, ಮನವ – ಮರೆವ, ಹಚ್ಚು – ಅಚ್ಚು, ಕೆಚ್ಚು.**

**ಪಡೆ – ತೊಡೆ, ಮಿಡಿ– ಹಿಡಿ, ಸಿಡಿ, ಕುಡಿ–ಮುಡಿ, ಭಿತಿ–ಪ್ರೀತಿ, ನೀತಿ. ಕಂಪು–ಸೊಂಪು, ಮರೆತೇವು–ತೊರೆದೇವು,**

**ಗಡಿನಾಡು–ನಡುನಾಡು, ಮನ– ಮನೆ, .**

ಆ. ಕೆಳಗೆ ನೀಡಿರುವ ಪದಗಳ ಅರ್ಥವ್ಯತ್ಯಾಸವನ್ನು ಗಮನಿಸಿ.

- ಹಚ್ಚು–ಹಚ್ಚೆವು–ಹಚ್ಚುವುದಿಲ್ಲ, ಹಚ್ಚೇವು – ಹಚ್ಚುತ್ತೇವೆ.
- ಬೀರು–ಬೀರೆವು–ಬೀರುವುದಿಲ್ಲ. ಬೀರೇವು – ಬೀರುತ್ತೇವೆ.
- ಮಾಡು–ಮಾಡೆವು–ಮಾಡುವುದಿಲ್ಲ. ಮಾಡೇವು – ಮಾಡುತ್ತೇವೆ.

ಇ. ಇದೇ ರೀತಿಯಲ್ಲಿ ನೋಡು, ಹಾಡು, ನಿಲ್ಲು, ಮೆಚ್ಚು ಮೊದಲಾದ ಪದಗಳನ್ನು ಕೆಳಗಿನ ವಾಕ್ಯದಲ್ಲಿ ಬಳಸಿ ವಾಕ್ಯ ಪೂರ್ಣಗೊಳಿಸಿ.

ನಾವು ಕನ್ನಡ ಚಲನ ಚಿತ್ರಗಳನ್ನು .................. **ಉ : ನೋಡೇವು**

ನಾವು ಕನ್ನಡ ಗೀತೆಗಳನ್ನು ........................... **ಉ : ಹಾಡೇವು**

ನಿಮಗಾಗಿ ನಾಳೆ ನಾವು ಕಾಯುತ್ತಾ .............................. **ಉ : ನಿಲ್ಲೇವು**

ನಿಮ್ಮೆಲ್ಲ ಚಿತ್ರಗಳನ್ನು ............................. ಉ : ಮೆಚ್ಚೇವು.

ಈ. ಒಂದೇ ಪದವನ್ನು ನಾಮಪದ ಮತ್ತು ಕ್ರಿಯಾಪದ ಅರ್ಥದಲ್ಲಿ ಮಾದರಿಯಂತೆ ಬಳಸಿ ವಾಕ್ಯ ರಚಿಸಿ.

**ಮಾದರಿ: ಕಳೆ : ನಮ್ಮ ಶಾಲಾ ಕೈತೋಟದಲ್ಲಿ ತುಂಬಾ ಕಳೆ ಬೆಳೆದಿದೆ. ರಾಜುವಿನ ಮುಖದಲ್ಲಿ ತುಂಬಾ ಕಳೆಯಿದೆ.**

1. ಹಂಚು: **ನಮ್ಮ ಮನೆ ಹಂಚಿನದಾಗಿದೆ. ನಾನು ಸಿಹಿಯನ್ನು ಹಂಚುತ್ತೇನೆ.**
2. ಕುಡಿ : **ನಾನು ದೀಪದ ಕುಡಿಯನ್ನು ಚಿವುಟಿ ದೀಪ ಹಚ್ಚುವೆ. ನಾನು ಚಹವನ್ನು ಕುಡಿಯುವುದಿಲ್ಲ.**
3. ಪಡೆ : **ದಸರಾ ಹಬ್ಬದಲ್ಲಿ ಗಜಪಡೆ ನೋಡಲು ಸುಂದರ. ನಾನು ಕೆಲಸ ಮಾಡಿದರೆ ನೂರು ರೂಪಾಯಿ ಪಡೆಯುತ್ತೇನೆ.**

**ಉ. ಮೊದಲೆರಡು ಪದಗಳ ಸಂಬಂಧ ಗ್ರಹಿಸಿ ಖಾಲಿಜಾಗದಲ್ಲಿ ಸೂಕ್ತ ಪದ ಭರ್ತಿಮಾಡಿ.**

1. ಆಂಧ್ರಪ್ರದೇಶ: ಹೈದರಾಬಾದ್:: ಕೇರಳ: ............... **ಉ : ತಿರುವನಂತಪುರ**
2. ಶತ್ರು: ಮಿತ್ರ :: ರಾತ್ರಿ: .................. **ಉ : ಹಗಲು**
3. ಮಾತಾ: ತಾಯಿ:: ಪಿತ: ..................... **ಉ : ತಂದೆ**
4. ದಾವಣಗೆರೆ: ನಡುನಾಡು:: ಬೆಳಗಾವಿ: ................. **ಉ : ಗಡಿನಾಡು.**

## ಪದ್ಯ ಪಾಠ 6 : ಬಿಡುಗಡೆಯ ಹಾಡು

ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಪಂಜರದ ಹಕ್ಕಿ ಯಾವುದರ ಸಂಕೇತವಾಗಿದೆ? **ಉ : ಸೆರೆಯ ಸಂಕೇತವಾಗಿದೆ.**
2. ಹಂಗಿನ ಅರಮನೆಯಲ್ಲಿ ಹಕ್ಕಿ ಹೇಗೆ ನರಳುತ್ತಿದೆ? **ಉ : ರೆಕ್ಕೆಗಳ ಬಿಗಿ ಹಿಡಿದು.**
3. ಮೃಗರಾಜ ಏನೆಂದು ಗೋಣಗುತ್ತಿದೆ? **ಉ : ಇಂದು ಈ ಬಂಧನ ಸಾಕು ಎಂದು**
4. ಯಾವುದು ರವಿಕಿರಣಗಳನ್ನು ಸೆರೆಯೊಳಗೆ ಅಡಗಿಸಿಟ್ಟುಕೊಂಡಿದೆ? **ಉ : ಕಾರಿರುಳು**

5. ನಮ್ಮ ಗುಡಿಯು (ಬಾವುಟ) ಎಷ್ಟು ಬಣ್ಣಗಳನ್ನು ಹೊಂದಿದೆ? **ಉ : ಮೂರು ಬಣ್ಣ**

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ಪಂಜರದಲ್ಲಿ ನರಳುತ್ತಿರುವ ಹಕ್ಕಿ ಹರ್ಷದಲಿ ವಿಹರಿಸಲು ಏನು ಮಾಡಬೇಕು?

**ಉ : ಹಂಗಿನರಮನೆಯ ಮುಳ್ಳಿನೀ ಪಂಜರದಲ್ಲಿ ರೆಕ್ಕೆಗಳ ಬಿಗಿ ಹಿಡಿದು ನರಳುತಿದೆ ಹಕ್ಕಿ ಕದ ಮುರಿದು ಹೊರಬಂದು ಬಾನಾಡಿಯಾಗುತ್ತ ವಿಹರಿಸಲಿ, ಹರ್ಷಿಸಲಿ ಹಿಗ್ಗಿನೊಳು ಸೊಕ್ಕಿ**

2. ತಿಳಿನೀರ ಮಳೆ ಏಕೆ ಸುರಿಯಬೇಕು?

**ಉ :'ವಿಕಿರಣಗಳ ಸೆರೆಯೊಳಡಗಿಸಿಹ ಕಾರಿರುಳೆ ಹೊರಗೆ ಬಿಡು, ದೂರ ಸರಿ ಹರಡಲೀ ಬೆಳಕು; ತೊಳೆದು ಹೋಗಲಿ ಸಕಲ ಮೈ ಮನದ ಕೊಳಕುಗಳು। ಒಳ – ಹೊರಗು ತಿಳಿನೀರ ಮಳೆ ಸುರಿಯಬೇಕು.**

3. ಕಡಲುಗಳ ರಾಣಿಗೆ ಇನ್ನು ಉಳಿಗಾಲವಿಲ್ಲವೇಕೆ?

**ಉ : ಪ್ರಾಣ ಪಣಕಿಟ್ಟಿಹೆವು – ಸಿಡಿಲ ಮರಿಗಳು ನಾವು ಪ್ರಳಯ ರುದ್ರರೆ ಹೌದು – ಭಾರತಿಯ ಆಣೆ. ಇನ್ನು ನಿನಗುಳಿಗಾಲವಿಲ್ಲ – ನೀ ತೊಲಗು ಇನ್ನೆಲ್ಲ ನೀನೇಳು ಕಡಲುಗಳ ರಾಣಿ.**

4. ಒಕ್ಕೊರಲ ಹಾಡನ್ನು ನಾವು ಹೇಗೆ ಹಾಡಬೇಕೆಂದು ಕವಿ ಬಯಸುತ್ತಾನೆ?

**ಉ : ಜಾತಿಮತ ಪಂಥಗಳ ಹುಟ್ಟುರುಹಿ ಮನುಜಮತ ಮೆರೆಸುವೆವು ಮೂರು ಬಣ್ಣದ ಗುಡಿಯ ಹಿಡಿದು, ಸರ್ವರಿಗು ಸಮನಾವು, ಮನದುಂಬಿ ದನಿಯೆತ್ತಿ ಹಾಡುವೆವು ಬಿಡುಗಡೆಯ ಒಕ್ಕೊರಲ ಹಾಡು.**

**ಇ. ಖಾಲಿಬಿಟ್ಟ ಜಾಗವನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಚಡಪಡಿಸುತಿದೆ ____________ ಹಾದಿ ಹುಡುಕಿ. **ಉ : ಮುನ್ನಡೆವ**

2. ಸೆರೆಯಿಂದ ನಾ ____________ ಸದರೇರಬೇಕು. **ಉ : ಜಿಗಿದು**

3. ಇನ್ನೆಲ್ಲ ನೀನೇಳು ________ ರಾಣಿ. **ಉ : ಕಡಲುಗಳ**

4. ಹಾಡುವೆವು ಬಿಡುಗಡೆಯ __________ ಹಾಡು. **ಉ : ಒಕ್ಕೊರಲ**

**ಚಟುವಟಿಕೆ**

**ಅ. ಸೂಚನೆಗಳನ್ನು ಗಮನಿಸಿ.**

1. ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪ್ರಮುಖರ ಹೆಸರುಗಳನ್ನು ಪಟ್ಟಿಮಾಡಿರಿ.

**ಉ : ಮಹಾತ್ಮ ಗಾಂಧಿ, ಸರ್ಧಾರ್ ವಲ್ಲಭ ಬಾಯಿ ಪಟೇಲ್, ಭಗತ್ ಸಿಂಗ್, ಚಂದ್ರಶೇಖರ ಅಜಾದ್, ಬಾಲ್ ಗಂಗಾಧರ ತಿಲಕ.**

2. ನಮ್ಮ ದೇಶದ ಬಾವುಟದ ಚಿತ್ರವನ್ನು ಬರೆದು ಚಿತ್ರಕ್ಕೆ ಸೂಕ್ತ ಬಣ್ಣವನ್ನು ಹಚ್ಚಿರಿ.

3. ಈ ಪದ್ಯದಲ್ಲಿ 2ನೇ ಹಾಗೂ 5ನೇ ಪದ್ಯಗಳನ್ನು ಕಂಠಪಾಠ ಮಾಡಿರಿ.

**ಆ. ಈ ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿ.**

ಸೆರೆಯಿಂದ : **ಸೆರೆ + ಇಂದ : ಯಕರಾಗಮ ಸಂಧಿ**

ಉಳಿಗಾಲ : ಉಳಿ +ಕಾಲ : ಗಕಾರಾದೇಶ ಸಂಧಿ.

ಹತ್ತಡಿಯ : ಹತ್ತು + ಅಡಿಯ : ಸ್ವರ ಲೋಪ ಸಂಧಿ

ಮನದುಂಬಿ : ಮನಸು + ತುಂಬಿ : ಆಧೇಶ ಸಂಧಿ.

**ಇ. ಕೆಳಗಿನ ಪದಗಳಿಗೆ ತತ್ಸಮ-ತದ್ಭವ ಪದಗಳನ್ನು ಬರೆಯಿರಿ.**

ಮೃಗ :

ರಾಜ : ರಾಯ

ಬಣ್ಣ : ವರ್ಣ

ಪ್ರಾಣ : ಹರಣ

ವಸನ :

ಹಕ್ಕಿ : ಪಕ್ಷಿ

**ಈ. ಕೆಳಗಿನ ವಾಕ್ಯಗಳನ್ನು ವೇಗವಾಗಿ ಓದುವುದನ್ನು ಅಭ್ಯಾಸ ಮಾಡಿ.**

1. ಗಿಡ ತಳಿರೊಡೆದೆರಡೆಲೆಯಾಯ್ತು.

2. ಸದ್ದುಗಿದ್ದು ಮಾಡಿಗೀಡಿದರೆ ಮುದ್ದುಗಿದ್ದಾಗಿರುವ ಗುದ್ದುಗಿದ್ದುಗಳು ಬಿದ್ದುಗಿದ್ದಾವು.

3. ಬಸಪ್ಪನ ಮನೆಯಲ್ಲಿ ಬಿಸಿಬಿಸಿ ಗಸಗಸೆ ಪಾಯಸದ ವಾಸನೆ.

## ಪದ್ಯ ಪಾಠ 7: ತಿರುಕನ ಕನಸು:

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ತಿರುಕನು ಎಲ್ಲಿ ಕನಸನ್ನು ಕಂಡನು ? **ಉ : ಊರ ಮುಂದೆ**

2. ಆನೆಯು ಯಾರ ಕೊರಳಿಗೆ ಮಾಲೆಯನ್ನು ಹಾಕಿತು ? **ಉ : ತಿರುಕನ ಕೊರಳಿಗೆ**

3. ತಿರುಕನಿಗೆ ಪಟ್ಟವನ್ನು ಕಟ್ಟಿದವರು ಯಾರು ? **ಉ : ನೃಪರು**

4. ರಾಜ ಲೋಲನಾಗಿ ಮಂತ್ರಿಗೆ ಏನೆಂದು ನುಡಿದನು ?

**ಉ : ಸುತರುಗಳಿಗೆ ಬಾಲೆಯರನು ನೋಡಿ ಮದುವೆಮಾಬೇಕೆಂದು ನುಡಿದನು**

5. 'ತಿರುಕನ ಕನಸು' ಈ ಪದ್ಯವನ್ನು ಬರೆದ ಕವಿಯಾರು? ಉ : **ಮುಪ್ಪಿನ ಷಡಕ್ಷರಿ**

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ಕರಿಯ ಕೈಗೆ ಕುಸುಮ ಮಾಲೆಯನ್ನು ಕೊಡಲು ಕಾರಣವೇನು?

**ಉ : ಪುರದ ರಾಜ ಸತ್ತಾಗ ಅವನಿಗೆ ವರಕುಮಾರರು ಇರದೇ ಇದ್ದುದಕಾಗಿ ರಾಜನ ಆಯ್ಕೆಗೆ ಕುಸುಮ ಮಾಲೆ ಕೊಟ್ಟಿದ್ದರು.**

2. ತಿರುಕ ಪೊಡವಿಯಾಣ್ಮನಾದುದು ಹೇಗೆ?

**ಉ : ಆನೆಯು ತಿರುಕನ ಕೊರಳಿಗೆ ಹೂವಿನ ಮಾಲೆಯನ್ನು ಹಾಕಿ ಪೊಡವಿಯಾಣ್ಮನಾದನು.**

3. ಕನಸು ಕಾಣುತ್ತಿದ್ದ ತಿರುಕನು ಹೆದರಿ ಏಕೆ ಕಣ್ಣು ತೆರದನು?

**ಉ : ಅನಿತರ ಒಳಗೆ ನೃಪರ ದಂಡು ಮನೆಯ ಮುತ್ತಿದಂತೆ ಆಗಿ ಕನಸ ಕಾಣುತ ಇರ್ದು ಹೆದರಿ ಕಣ್ಣ ತೆರದನು.**

**ಇ. ಐದಾರು ವಾಕ್ಯಗಳಲ್ಲಿ ಉತ್ತರಿಸಿ.**

1. ತಿರುಕನು ರಾಜನಾದದ್ದು ಹೇಗೆ ?

**ಉ : ಕರಿಯ ಕೈಗೆ ಕುಸುಮಮಾಲೆಯ ಇತ್ತು ಪುರದ ಒಳಗೆ ಅದು ನಡೆದು ಯಾರ ಕೊರಳಿನಲ್ಲಿ ತೊಡರಿಸುವದೊ ಅವರ ಪಟ್ಟಕೆ ಒಡೆಯರನ್ನ ಮಾಳ್ಪೆವು ಎಂದು ಬಿಟ್ಟರು ಅಲ್ಲಿಯೆ. ಒಡನೆ ತನ್ನ ಕೊರಳಿನಲ್ಲಿ ತೊಡರಿಸಲ್ಕೆ ಕಂಡು ತಿರುಕ ಪೊಡವಿ, ಆಣ್ಮನು ಆದೆನು ಎಂದು ಹಿಗ್ಗುತ ಇರ್ದನು.**

2. ತಿರುಕನು ಕನಸಿನಲ್ಲಿ ರಾಜ್ಯವನ್ನು ಆಳಿದ ರೀತಿಯನ್ನು ವಿವರಿಸಿ.

**ಉ : ಧನದ ಮದವು, ರಾಜ್ಯ ಮದವು, ತನುಜ ಮದವು, ಯುವತಿ ಮದವು ಜನಿತಮಾಗಿ ಕನಸಿನಲ್ಲಿಹಿಗ್ಗುತ ಇರ್ದನು.**

**ಈ. ಈ ಪದ್ಯಭಾಗವನ್ನು ಪೂರ್ಣಗೊಳಿಸಿ.**

ಧನದ ಮದವು ----------------- ಹಿಗ್ಗುತ್ತಿರ್ದನು.

**ಉ : ಧನದ ಮದವು ರಾಜ್ಯ ಮದವು ತನುಜ ಮದವು ಯುವತಿ ಮದವು ಜನಿತಮಾಗಿ ಕನಸಿನಲ್ಲಿ ಹಿಗ್ಗುತ್ತಿರ್ದನು**
**ಅನಿತರೊಳಗೆ ನೃಪರ ದಂಡು ಮನೆಯ ಮುತ್ತಿದಂತೆಯಾಗೆ ಕನಸ ಕಾಣುತಿರ್ದು ಹೆದರಿ ಕಣ್ಣ ತೆರೆದನು.**

**ಉ. ಮಾದರಿಯಂತೆ ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆಯಿರಿ.**

ಮಾದರಿ : ತಿರುಕನೊರ್ವನೂರಮುಂದೆ ತಿರುಕನು + ಒರ್ವನು + ಊರ + ಮುಂದೆ

1. ಒರಗಿರುತ್ತಲೊಂದು : **ಉ ಒರಗಿ+ ಇರುತ್ತಲೀ + ಒಂದು**

2. ವರಕುಮಾರರಿಲ್ಲದಿರಲು : **ಉ : ವರಕುಆರರು + ಇಲದೇ + ಇರಲು**

3. ಪೊಡವಿಯಾಣ್ಮನಾದನೆಂದು. **ಉ : ಪೊಡವಿಯ + ಆಣ್ಮನು + ಆದನೆಂದು**

4. ನಿಷ್ಟಸುಖದೊಳಿರಲವಂಗೆ **ಉ : ನಿಷ್ಟಸುಖದೊಳು + ಇರಲು + ಅವಂಗೆ.**

## ಪದ್ಯ ಪಾಠ 8

## ಅಭಿಮನ್ಯು ಪರಾಕ್ರಮ

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಧರ್ಮರಾಯನಿಗೆ ನಮಸ್ಕರಿಸಿದ ಅಭಿಮನ್ಯು ಹೇಳುವುದೇನು?

**ಉ : "ಎನಗೆ ಬೆಸಸೈ ಬೊಪ್ಪ, ತಾ ಬಲ್ಲೆನು ಮಹಾ ಆಹವದ ಒಳಗೆ ಪದ್ಮವ್ಯೂಹ ಭೇದನವ. ಅನುವರವ ಗೆಲುವೆನು, ಕೃತಾಂತನ ಮನೆಗೆ ಕಳುಹುವೆನು ಅಹಿತರನು, ನೀನು ಇನಿತು ಚಿಂತಿಸಲೇಕೆ ಕಾಳಗಕೆ ಎನ್ನ ಕಳುಹು" ಎಂದ.**

2. ಅಭಿಮನ್ಯುವಿನ ಮಾತನ್ನು ಕೇಳಿ ಧರ್ಮರಾಯ ಏನು ಹೇಳುತ್ತಾನೆ?

**ಉ : "ಘನ ಪೌರುಷವು ನಿನಗೆ ಉಂಟು" ಎಂದು ಕಂದನ ತೆಗೆದು ಬಿಗಿದು ಅಪ್ಪಿ "ಶಿಶುವು ನೀನೆಲೆ ಮಗನೆ, ಕಾದುವರು ಅಸಮಬಲರು ಕಣಾ, ಮಹಾರಥರ ಎಸುಗೆಯನು ನೀನು ಎಂತು ಸೈರಿಸಲು ಆಪೆ? ಹೇಳು" ಎಂದ.**

3. ಧರ್ಮರಾಯನ ಮಾತಿಗೆ ಅಭಿಮನ್ಯು ಕೊಡುವ ಉತ್ತರವೇನು?

**ಉ : "ಬಿಡು ಮರೀಚಿಯ ತೊರೆಗೆ ಹರುಗೋಲ ಇಡುವರು ಉಂಟೇ, ಲೆಪ್ಪದ ಉರುಗನ ಹಿಡಿಯಲು ಏತಕೆ ಗರುಡ ಮಂತ್ರವು, ಚಪಲನು ಎನ್ನದಿರು, ಕೊಡನ ಮಗನ ಕುಮಂತ್ರದ ಒಡ್ಡಿನ ಕಡಿತಕೆ ಆನು ಅಂಜುವೆನೆ? ವೆಗ್ಗಳ ನುಡಿಯಲು ಅಮ್ಮೆನು ತನ್ನನ್ನು ಈಗಳೆ ಬಿಟ್ಟು ನೋಡು ಎಂದ**

**ಆ. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಲೆಪ್ಪದುರುಗನ ಹಿಡಿಯಲೇತಕೆ ಗರುಡಮಂತ್ರವು-ಎಂದರೇನು?

**ಉ : ವಿಗ್ರಹಗಳನ್ನು ಮಾಡುವ ಎರಕದಿಂದ ಮಾಡಿದ ಹಾವನ್ನು ಹಿಡಿಯಲು ಏಕೆ ಹಾವನ್ನು ಹಿಡಿಯಲು ಬಳಸುವ ಮಂತ್ರದ ಅವಶ್ಯಕ.**

2. ನಿಮ್ಮ ಆಲಿಗಳಿಗೆ ಏನು ಇಕ್ಕುವೆ ಎಂದು ಅಭಿಮನ್ಯು ಹೇಳುತ್ತಾನೆ?

**ಉ: "ಗಾಳಿ ಬೆಮರುವುದು ಉಂಟೆ? ವಹ್ನಿಜ್ವಾಲೆ ಹಿಮಕೆ ಅಂಜುವುದೆ? ಮಂಜಿನ ಮೇಲುಗಾಳೆಗ ಉಂಟೆ ಬಲುಬೇಸಗೆಯ ಬಿಸಿಲ ಒಳಗೆ? ಬಾಲನು ಇವನು ಎನ್ನದಿರು, ದುಗುಡವ ತಾಳಲಾಗದು ಬೊಪ್ಪ, ನಿಮ್ಮಡಿ ಆಲಿಗಳಿಗೆ ಔತಣವನು ಇಕ್ಕುವೆನು ಒರಸಿ ರಿಪುಬಲವ!"**

3. ವೈರಿವ್ಯೂಹದೊಳಗೆ ಇರುವ ವೀರರು ಯಾರು?

**ಉ: ಕೃಪ-ಗುರುನಂದನರು, ರಾಧೇಯ, ಬೂರಿಶ್ರವ, ಜಯದ್ರಥ, ಇಂದುಧರ**

**ಇ. ಕೆಳಗಿನ ವಾಕ್ಯಗಳನ್ನು ಯಾರು, ಯಾರಿಗೆ ಹೇಳಿದರು? ತಿಳಿಸಿ.**

1. ಶಿಶುವು ನೀನೆಲೆ ಮಗನೆ ಕಾದುವರಸಮಬಲರು ಕಣಾ! **ಉ: ಯಾರು : ಧರ್ಮರಾಯ, ಯಾರಿಗೆ: ಅಭಿಮನ್ಯುವಿಗೆ**
2. ಕೊಡನ ಮಗನ ಕುಮಂತ್ರದೊಡ್ಡಿನ ಕಡಿತಕಾನಂಜುವೆನೆ? **ಉ : ಯಾರು : ಅಭಿಮನ್ಯು, ಯಾರಿಗೆ : ಧರ್ಮರಾಯನಿಗೆ**
3. ನೀಗೆಲುವಂದವೆಂತೈ ಸಮರವಿದು ಸಾಮಾನ್ಯವಲ್ಲೆಂದ **ಉ : ಯಾರು : ಧರ್ಮರಾಯ, ಯಾರಿಗೆ : ಅಭಿಮನ್ಯುವಿಗೆ.**
4. ಬಾಲನಿವನೆನ್ನದಿರು ದುಗುಡವ ತಾಳಲಾಗದು ಬೊಪ್ಪ. **ಉ : ಯಾರು : ಅಭಿಮನ್ಯು, ಯಾರಿಗೆ : ಧರ್ಮರಾಯನಿಗೆ**

**ಈ. 'ಅ' ಪಟ್ಟಿಯಲ್ಲಿನ ಪದಗಳಿಗೆ 'ಆ'ಪಟ್ಟಿಯಲ್ಲಿ ಅರ್ಥ ನೀಡಲಾಗಿದೆ. ಪಟ್ಟಿಗಳ ಪದಗಳನ್ನು ಹೊಂದಿಸಿ ಬರೆಯಿರಿ.**

| 'ಅ' ಪಟ್ಟಿ | 'ಆ' ಪಟ್ಟಿ |
|---|---|
| 1. ಅದಟು | ಅಪ್ಪಣೆ 6 |
| 2. ಸೈರಿಸಲಾಪೆ | ನಾಶಮಾಡು 5 |
| 3. ಅಮ್ಮೆನು | ಪರಾಕ್ರಮ 1 |
| 4. ಅಸದಳ | ಸಾಧ್ಯವಾಗುವುದಿಲ್ಲ 3 |
| 5. ಖಂಡಿಗೆಳೆ | ಅಸಾಧ್ಯ 4 |
| 6. ನೇಮ | ತಡೆದುಕೊಳ್ಳಲು ಸಾಧ್ಯ 2 |

## ಪೂರಕ ಪಾಠ 3 : ಸಾವಿತ್ರಿ ಬಾಯಿ ಫುಲೆ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಸಾವಿತ್ರಿಬಾಯಿಯವರು ಎಲ್ಲಿ ಜನಿಸಿದರು?

**ಉ : ಮಹಾರಾಷ್ಟ್ರದ ಸತಾರ ಜಿಲ್ಲೆಯ ನಾಯಗಾಂವ ಹಳ್ಳಿಯಲ್ಲಿ 1831 ಜನವರಿ 3 ರಲ್ಲಿ ಜನಿಸಿದರು.**

2. ಸಾವಿತ್ರಿಬಾಯಿಯವರ ಮೊದಲನೆಯ ಗುರು ಯಾರಾಗಿದ್ದರು? **ಉ : ಗಂಡ ಜ್ಯೋತಿ ಬಾ ಫುಲೆ**

3. ಭಾರತದ ಮೊತ್ತಮೊದಲ ಸ್ತ್ರೀವಾದಿ ಲೇಖಕಿ ಯಾರು? **ಉ : ತಾರಾಬಾಯಿ ಶಿಂಧೆ**

4. ಸತ್ಯ ಶೋಧಕ ಸಮಾಜದ ಮೂಲತತ್ವವೇನು?

**ಉ : 'ನಾವೆಲ್ಲರೂ ದೇವರ ಮಕ್ಕಳು; ದೇವರಿಗೂ ನಮಗೂ ಯಾವ ಮಧ್ಯವರ್ತಿಯ ಅವಶ್ಯಕತೆಯೂ ಇಲ್ಲ' ಎನ್ನುವುದು**

5. ಫುಲೆ ದಂಪತಿಗಳು ಯಾರನ್ನು ದತ್ತು ಪಡೆದರು?

**ಉ : ಬ್ರಾಹ್ಮಣ ವಿಧವೆ ಕಾಶೀಬಾಯಿಯ ಮಗ ಯಶವಂತ**

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಈ ಹಿಂದೆ ಹೆಣ್ಣು ಅಕ್ಷರ ಕಲಿತರೆ ಏನಾಗುತ್ತದೆಂದು ಹೇಳಲಾಗುತ್ತಿತ್ತು?

**ಉ : "ಹೆಣ್ಣು ಅಕ್ಷರ ಕಲಿತರೆ ಎಲ್ಲರಿಗೂ ಪತ್ರ ಬರೆಯತೊಡಗುತ್ತಾಳೆ. ಆಗ ಅವಳ ಗಂಡ ತಿನ್ನುವ ಅನ್ನದ ಅಗುಳು ಹುಳವಾಗಿ ಅವನು ಕಾಯಿಲೆ ಹಿಡಿದು ಬೇಗ ತೀರಿಕೊಳ್ಳುತ್ತಾನೆ" ಎಂದು ಹೇಳಲಾಗುತ್ತಿತ್ತು.**

2. ಸ್ವಾತಂತ್ರ್ಯ ಚಳುವಳಿ ರೂಪುಗೊಳ್ಳುತ್ತಿದ್ದ ಕಾಲದಲ್ಲಿ ಹೆಣ್ಣಿನ ಪರಿಸ್ಥಿತಿ ಹೇಗಿತ್ತು?

**ಉ : ಬಾಲ್ಯ ವಿವಾಹ ಹಾಗೂ ಸತಿ ಪದ್ಧತಿಯ ರದ್ಧತಿ ಕುರಿತು ಕೇಳಿ ಬರತೊಡಗಿದ್ದವು. ಅಕ್ಷರ ಕಲಿಯಲು ತಾವು ಮಾತ್ರ ಅರ್ಹ ಎಂದುಕೊಂಡ ಜಾತಿಗಳ ಹೊರತು ಮತ್ತಾರಿಗೂ ಕಲಿಕೆಗೆ ಅವಕಾಶವಿರಲಿಲ್ಲ.**

3. ಫುಲೆ ದಂಪತಿಗಳು ಶಾಲೆ ತೆರೆಯುತ್ತಾ ಹೋದಂತೆ ಎದುರಿಸಿದ ಸಮಸ್ಯೆಗಳಾವುವು?

**ಉ: ಶಾಲೆಗೆ ಹೋಗುವಾಗ ದಾರಿ ಮೇಲೆ ತೂರಿ ಬರುವ ಕಲ್ಲು, ಮಣ್ಣು, ಸಗಣಿಗಳ ದಾಳಿಗೆ ಎದೆಗುಂದದೇ ಪಾಠ ಹೇಳಿದರು ಅಕ್ಷರ ಕಲಿಯಬಾರದವರಿಗೆ ಕಲಿಸುತ್ತ ಧರ್ಮದ್ರೋಹ ಮಾಡುತ್ತಿದ್ದಾರೆ ಎಂಬ ಆಪಾದನೆಗಳು ಬಂದವು. ಬೆದರಿಕೆಗಳೂ ಬಂದವು. ಅದೆಲ್ಲದರಿಂದ ಒತ್ತಡಕ್ಕೊಳಗಾದ ಜೋತಿಬಾ ತಂದೆ ಮಗಸೊಸೆಯನ್ನು ಮನೆಯಿಂದ ಹೊರಕಳಿಸಿದರು.. ಬಂಧುಬಳಗಕ್ಕೂ, ಹಿತೈಷಿಗಳಿಗೂ ಉತ್ತರಿಸುತ್ತ, ಮನವೊಲಿಸುತ್ತ ಫುಲೆ ದಂಪತಿಗಳು ತಮ್ಮ ಕೆಲಸ ಮುಂದುವರೆಸಿದರು**

4. ಫುಲೆ ದಂಪತಿಗಳು ಕೈಗೊಂಡ ಸಾಮಾಜಿಕ ಸುಧಾರಣೆಗಳಾವುವು?

**ಉ : 1868 ರಲ್ಲಿ ಎಲ್ಲರಿಗೂ ಬಳಕೆಗೆ ಮುಕ್ತವಾದ ನೀರಿನ ತೊಟ್ಟಿ ಕಟ್ಟಿದರು. ಜಾತಿ ತಾರತಮ್ಯ ಮತ್ತು ಶೋಷಣೆಯನ್ನು ಕೊನೆಗೊಳಿಸಬೇಕೆಂದರೆ ಚಿಂತನಶೀಲತೆಯನ್ನು, ಸತ್ಯ ತಿಳಿಯಬೇಕೆಂಬ ಹಂಬಲವನ್ನು ಜನರಲ್ಲಿ ಬಿತ್ತಬೇಕೆಂಬ ಮಹದಾಸೆಯಿಂದ 1873 ರಲ್ಲಿ 'ಸತ್ಯಶೋಧಕ ಸಮಾಜ' ಕಟ್ಟಿದರು.**

## ಪೂರಕ ಪಾಠ 4 : ರಮ್ಯ ಸೃಷ್ಟಿ

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

1. 'ರಮ್ಯಸೃಷ್ಟಿ' ಕವಿತೆಯಲ್ಲಿ ಯಾವ ಸಂದರ್ಭವನ್ನು ವರ್ಣಿಸಲಾಗಿದೆ? **ಉ : ಸೂರ್ಯನನ್ನು**

2. ಸೂರ್ಯ ಎಲ್ಲಿ ವಿರಾಜಿಸುತ್ತಿದ್ದಾನೆ? **ಉ : ನಭಾಂಗಣದಲ್ಲಿ**

3. ಸೂರ್ಯೋದಯದ ಪ್ರಕೃತಿಸೌಂದರ್ಯ ಹೇಗಿದೆ?

**ಉ : ಹೊನ್ನ ಬಿಸಿಲು ಸೂಸಿ ಸೂಸಿ ರನ್ನನೆಲದಿ ಹಾಸಿ ಹಾಸಿ ತರುವು ಹಸಿರು ಮರವು ಹಸಿರು ಮೆರೆವ ಹುಲ್ಲು ಹಚ್ಚಹಸಿರು.**

4. ಜೀವರಾಶಿಯ ವರ್ಣನೆ 'ರಮ್ಯಸೃಷ್ಟಿ' ಕವನದಲ್ಲಿ ಹೇಗೆ ಮೂಡಿಬಂದಿದೆ?

**ಉ: ಮರದ ಸಾಲು ಮೇವ ಮೇಕೆ ತೆರೆದ ಹಕ್ಕಿ ಏನು ಚೆಲುವು ಎತ್ತು ಎಮ್ಮೆ ಆಡು ಆವು ಚಿತ್ತಗೊಟ್ಟು ಮೇವ ಠೀವು**

5. 'ರಮ್ಯಸೃಷ್ಟಿ' ಪದ್ಯದಲ್ಲಿ ಯಾವ ಯಾವ ಪ್ರಾಣಿಗಳು ಮೇಯುವ ಠೀವಿಯನ್ನು ವರ್ಣಿಸಲಾಗಿದೆ? **ಉ : ಎತ್ತು ಎಮ್ಮೆ ಆಡು**

6. ಯಾವುದರ ಚೆಲುವಿಗೆ ಮಿಗಿಲಿಲ್ಲದಂತಾಗಿದೆ?

**ಉ: ಹೆಣ್ಣು ಗಂಡು ಕೂಸು ಕುನ್ನಿ ದಿನ್ನಿ ದಿಬ್ಬ ಹಾದಿ ಬೀದಿ ಏನು ಚಂದ ಏನು ಚೆಲುವು ಏನು ಬೇಕು ಇದಕು ಮಿಗಿಲು**

## ಪೂರಕ ಪಾಠ 5 : ನನ್ನ ಅಯ್ಯ

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.**

1. ಲೇಖಕಿಯ ತಂದೆಯ ಹೆಸರೇನು? **ಉ : ದು. ಸರಸ್ವತಿ**

2. ದುರ್ಗಪ್ಪನವರು ತನ್ನ ಹೆಂಡತಿಯನ್ನು ಏನೆಂದು ಕರೆಯುತ್ತಿದ್ದರು? **ಉ : ಬಿಲವ್ಡ್ ವೈಫ್**

3. ದುರ್ಗಪ್ಪನವರು ತನ್ನ ಮಕ್ಕಳಿಗೆ ಯಾವ ಸಿನಿಮಾ ತೋರಿಸುತ್ತಿದ್ದರು?

**ಉ : ರಾಷ್ಟ್ರೀಯ ಪ್ರಶಸ್ತಿ ಪಡೆದ ಮಕ್ಕಳ ಚಿತ್ರ ಅಥವಾ ರಾಜ್‌ಕುಮಾರ್ ಸಿನಿಮಾ**

4. ದುರ್ಗಪ್ಪನವರು ತನ್ನ ಹೆಂಡತಿಯನ್ನು ಹೇಗೆ ಆರೈಕೆ ಮಾಡುತ್ತಿದ್ದರು?

**ಉ: ಆಸ್ಪತ್ರೆ ಹಾಸಿಗೆಯಲ್ಲಿ ಮಗುವಿನಂತೆ ಮಲಗಿದ್ದ ಅವ್ವನನ್ನು, ಅಯ್ಯ (ಅಪ್ಪ) ಮಗುವಿನಂತೆ ಆರೈಕೆ ಮಾಡುತಿದ್ದ. ತುತ ್ತುಬಾಯಿಗಿರಿಸುತಿದ್ದ. ಅವಳು ವಾಂತಿ ಮಾಡಿದರೆ ತನ್ನ ಬೊಗಸೆಯನ್ನೇ ಒಡ್ಡಿ ಸ್ವಚ್ಛ ಮಾಡುತ್ತಿದ್ದ. ಅವಳ ಬಟ್ಟೆಯನ್ನು ಲವಲೇಶವೂ ಗಂಡಸೆಂಬ ದೊಡ್ಡಸ್ತಿಕೆ ತೋರದೇ ಒಗೆದು ಹಾಕುತ್ತಿದ್ದ.**

5. ದೇಹ ಗುಡಿಯೆಂಬುದನ್ನು ಲೇಖಕಿ ಹೇಗೆ ಅರಿತರು?

**ಉ : ಲೋಕದ ಇನ್ನಾವ ಕೊಳೆಯೂ ತಾಕಬಾರದು ಎನ್ನುವಂತೆ ನನ್ನ ಮತ್ತು ಅಕ್ಕನ ಉದ್ದನೆಯ ರಾಶಿ ಕೂದಲನ್ನು ಸೀಗೆಪುಡಿಯಲ್ಲಿ ನವಿರಾಗಿ ಉಜ್ಜಿ ತೊಳೆದು, ಮೈಯನ್ನು ಮೆತ್ತನೆ ತೆಂಗಿನ ನಾರಿನಲ್ಲಿ ಉಜ್ಜಿ ಸ್ನಾನ ಮಾಡಿಸುತ್ತಿದ್ದ ನನ್ನ ಅಯ್ಯ. ಸಾಂಬ್ರಾಣಿ ಧೂಪ ಹಾಕಿ ಚೂರೂ ನೋವಾಗದಂತೆ ಸಿಕ್ಕು ಬಿಡಿಸುತ್ತಿದ್ದ. ದೇಹ ಗುಡಿಯೆಂಬುದನ್ನು ಅವರಿಂದಲೇ ಕಲಿತೆ**

6. ಅಪ್ಪನ ಕೆಲಸದ ಬಗ್ಗೆ ಲೇಖಕಿ ಹೇಳುವ ಹೆಮ್ಮೆಯ ಮಾತುಗಳಾವುವು?

**ಉ : ಅಧಿಕಾರದಲ್ಲಿದ್ದರೂ ಎಂದೂ ಭ್ರಷ್ಟನಾಗದ ನಮ್ಮಯ್ಯ ಒಂದೇ ಒಂದು ಕಾಸನ್ನೂ ಅನ್ಯಾಯದಿಂದ ಸಂಪಾದಿಸಿಲ್ಲ. ನಾಲ್ಕೇ ಜೊತೆ ಬಟ್ಟೆಯನ್ನು ಅಚ್ಚುಕಟ್ಟಾಗಿ ತೊಟ್ಟು, ಯಾವುದೇ ವ್ಯಸನಗಳಿಗೆ ಈಡಾಗದೇ , ಕೆಲಸವನ್ನು ಶ್ರದ್ಧೆಯಿಂದ ಮಾಡಿ ಮುಗಿಸುವ ಅಯ್ಯ, ಯಾರ ಮುಲಾಜಿಗೂ ಒಳಪಟ್ಟವನಲ್ಲ. ಯಾರನ್ನೂ ಯಾವ ಕಾರಣಕ್ಕೂ ಓಲೈಸಲು ಹೋಗದ ಅವನ ನಡೆ, ನುಡಿ, ನಿಲುವು, ವರ್ತನೆ, ಎಲ್ಲದರಲ್ಲೂ ಆತ್ಮವಿಶ್ವಾಸ, ಸ್ವಾಭಿಮಾನವೇ ಉಸಿರಾಡುತ್ತವೆ. ಇವನ ಕೋಪ ಗುಡುಗಿನಂತೆ, ಮನಸ್ಸಿನಲ್ಲಿರುವುದನ್ನು ನೇರವಾಗಿ ಹೇಳಿಬಿಡುವ ಇವನ ಮಾತು ನಿಷ್ಠೂರ, ಅಷ್ಟೇ ನಿಷ್ಠೂರನಾಗಿ ತಪ್ಪಿಗೆ ಕ್ಷಮೆ ಕೇಳಿಬಿಡುವವ. ಸಂಚು ವಂಚನೆಗಳಿಂದ ದೂರವಿರುವ ಪ್ರಾಮಾಣಿಕ.**

### 1. ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು

1. ಹಾಡ್ಗತೆ – ಹಾಡು ಸೇರಿರುವ ಕತೆ;
2. ತರಾವರಿ –ವಿಧವಿಧವಾದ;
3. ಭೀತಿ – ಭಯ, ಹೆದರಿಕೆ;
4. ಪ್ರಾಣಿಗಿಂಡಿ – ಕಾಡಿನಲ್ಲಿರುವ ಪ್ರಾಣಿಗಳು ನೀರನ್ನು ಕುಡಿಯುವುದಕ್ಕಾಗಿ ಹೋಗಲು ಮಾಡಿಕೊಂಡ ಕಿಂಡಿ ;
5. ಅಂಗಳ–ಅಂಗಣ, ಮನೆಯ ಮುಂದಿನ ಅಥವಾ ಹಿಂದಿನ ಬಯಲು ಭಾಗ;
6. ಸಾಂತ್ವನ – ಸಮಾಧಾನ,
7. ಆಶ್ರಯ –ಆಸರೆ, ಸಹಾಯ, ರಕ್ಷಣೆ;
8. ಮದ್ದು–ಔಷಧ;
9. ಪಲಾಯನ ಪಠಿಸು–ಓಡಿಹೋಗು;
10. ಮಾಗು–ಒಣಗು, ವಾಸಿಯಾಗು;
11. ಸಂಭ್ರಮ– ಉತ್ಸಾಹ, ಸಡಗರ,
12. ಸಂತೋಷ ; ಬಿಡೆ–ಬಿಡುವುದಿಲ್ಲ;

### 2. ಸೀನ ಸೆಟ್ಟರು ನಮ್ಮ ಟೀಚರು

13. ತೀವ್ರ–ಹೆಚ್ಚು;
14. ಲಪ್ಪಟೆ–ತಲೆಗೆ ಸುತ್ತಿದ ಬಟ್ಟೆ;
15. ಪಕ್ಕಾಗು–ಒಳಗಾಗು;
16. ಎಂತಾ ಮಗ–ಏನು ಮಗು;
17. ಚಂದ–ಚೆನ್ನಾಗಿ;
18. ಪಡಪೋಶಿ–ಕೆಲಸಕ್ಕೆ ಬಾರದ;
19. ಕರ್ಸಿದಾರೆ–ಕರೆಸಿದ್ದಾರೆ;
20. ತಳಹದಿ–ಬುನಾದಿ;
21. ಸಂವಾದಿಸು–ಮಾತನಾಡು, ಚರ್ಚೆಮಾಡು;
22. ಕಂಬಳಿಗೊಪ್ಪೆ–ಮಳೆಯಿಂದ ರಕ್ಷಿಸಿಕೊಳ್ಳಲು ಕಂಬಳಿಯಿಂದ ಮಾಡಿದ ಮುಸುಕು; ಗೊರಬು,
23. ತೆರವು–ಖಾಲಿ
24. ನಾಟಿ–ಪೈರಿನ ಸಸಿಗಳನ್ನು ನೆಡುವುದು;
25. ನೀರಾವು–ನೀರಿನಲ್ಲಿ ಬದುಕುವ ಹಾವು;
26. ಹೋತು–ಹೋಯಿತು;
27. ಕದ–ಬಾಗಿಲು;
28. ಹೊಡೆ–ಕಾಳು ತುಂಬುವ ಮುನ್ನ ಕಾಣುವ ಪೈರಿನ ತುದಿ;
29. ತೆನೆ– ಕಾಳು ತುಂಬಿದ ಪೈರಿನ ತುದಿ.

### 3. ಅನ್ನದ ಹಂಗು ಅನ್ಯರ ಸ್ವತ್ತು

30. ದಾಕ್ಷಿಣ್ಯ–ಸಂಕೋಚ, ಹಿಂಜರಿಕೆ,
31. ಮರ್ಜಿ– ಇಷ್ಟ, ಧೋರಣೆ;
32. ಶುಶ್ರೂಷೆ–ಉಪಚಾರ, ಸೇವೆ;
33. ಸಾರಥಿ–ರಥವನ್ನು ನಡೆಸುವ ಚಾಲಕ.

### 4. ಪರಿಸರ ಸಮತೋಲನ

34. ಆಚ್ಛಾದನ – ಬಟ್ಟೆ, ವಸ್ತ್ರ;
35. ಪರ್ಣ – ಎಲೆ;
36. ಗೋಣು – ಕುತ್ತಿಗೆ;
37. ಪಿತೃ – ತಂದೆ;
38. ವೀಳ್ಯ – ತಾಂಬೂಲ (ಎಲೆ, ಅಡಿಕೆ);
39. ಚರ್ವಣ – ಅಗಿದು ತಿನ್ನುವುದು;
40. ಶತಮಾನ – ನೂರು ವರ್ಷಗಳು;
41. ಕ್ರೋಮೋಝೋಮು – ವರ್ಣತಂತು;
42. ರಾಜಿ – ಗುಂಪು;
43. ವಿಪುಲ – ಹೆಚ್ಚು, ಜಾಸ್ತಿ;
44. ಆರ್ದ್ರತೆ – ನೀರಿನ ಅಂಶ, ತೇವಾಂಶ;
45. ಪಾಶ್ಚಾತ್ಯ – ಪಶ್ಚಿಮದೇಶ;
46. ಕಿಸೆ– ಜೇಬು;
47. ತಾಣ– ಜಾಗ, ಸ್ಥಳ;
48. ಚಿಗರೆ – ಜಿಂಕೆ;
49. ಅವಿತು – ಬಚ್ಚಿಟ್ಟುಕೊಳ್ಳುವುದು;
50. ಕಣ್ಣು ಕಪ್ಪಡಿ – ಬಾವಲಿ;
51. ವಿಧಾಯಕ– ರಚನಾತ್ಮಕ.

### 1. ಗಿಡಮರ

52. ಬೊಡ್ಡೆ–ಮರದ ಕಾಂಡದ ಭಾಗ;
53. ಅನುದಿನ–ದಿನನಿತ್ಯ;
54. ಕರಿದು–ಕಪ್ಪಾದ ಬಣ್ಣ; ತರತರ–ವಿಧವಿಧವಾದ;
55. ಕಡಲುಕ್ಕುವ–ಸಮುದ್ರ ಉಕ್ಕಿದಂತೆ;
56. ಮನ–ಮನಸ್ಸು;
57. ಹಾಳುಕೊಂಪೆ– ನಾಶಹೊಂದಿದ ಊರು.

## 2. ಸ್ವಾತಂತ್ರ್ಯ ಸ್ವರ್ಗ

58. ನಿರ್ಭೀತ–ಭಯವಿಲ್ಲದ;
59. ಮಸ್ತಕ–ತಲೆ;
60. ಹೋಳು–ತುಂಡು;
61. ಹರಹು–ವಿಸ್ತಾರ ;
62. ವಾಹಿನಿ–ನದಿ;
    ಹರಿಗಡಿಯದೆ–ಹರಿಯುವಿಕೆಯು ನಿಲ್ಲದೆ;
63. ವೈಶಾಲ್ಯ–ವಿಶಾಲತೆ;
64. ಧ್ರುವತಾರೆ–ಧ್ರುವನಕ್ಷತ್ರ (ಸ್ಥಿರವಾದ ಲಕ್ಷ್ಯ);
65. ನಿರ್ಮುಕ್ತ–ಸರ್ವಸ್ವತಂತ್ರ.

## 3. ಭಾಗ್ಯದ ಬಳೆಗಾರ

66. ತವರು–ತಾಯಿಯ ಮನೆ;
67. ಬಾಳೆ–ಬಾಳೆಯಗಿಡ;
68. ಸೀಬೆ–ಪೇರಳೆ;
69. ಮುತ್ತೈದೆ–ಮದುವೆಯಾದ ಹೆಣ್ಣು ;
70. ಕಂಚು–ಒಂದು ಲೋಹ;
71. ಮಿಂಚಾಡು–ಹೊಳೆಯುವುದು;
72. ಗಿಣಿ–ಗಿಳಿ;
73. ಆಲೆ– ಕಬ್ಬಿನ ರಸ ತೆಗೆಯುವ ಯಂತ್ರ, ಗಾಣ;
74. ಸಾರಂಗ–ಮೈಮೇಲೆ ಚುಕ್ಕೆಗಳಿರುವ ಜಿಂಕೆ;
75. ಪಗಡೆ– ಒಂದು ರೀತಿಯ ಆಟ;
76. ನಟ್ಟ ನಡುವೆ– ಮಧ್ಯೆ;
77. ಹಟ್ಟಿ–ಮನೆ;
78. ಹಡೆದವ್ವ– ಹೆತ್ತ ತಾಯಿ;
79. ಕೊಂಡ್ಹೋಗು–ತೆಗೆದುಕೊಂಡುಹೋಗು.

## 4. ವಚನಗಳ ಭಾವ ಸಂಗಮ

80. ತಿರಿ–ಭಿಕ್ಷೆಬೇಡು, ತಿರುಗಾಡು;
81. ಮಿಸುನಿ–ಚಿನ್ನ, ಹೊನ್ನು;
82. ಅರೆದು–ತೇದು, ಉಜ್ಜಿ;
83. ಅರಿ–ಕತ್ತರಿಸು;
    ಬೆದರು–ಹೆದರು, ಭಯಪಡು;
84. ಕರ–ಕೈ;
85. ಅಂಧಕಾರ–ಕತ್ತಲೆ, ತಿಮಿರ;
86. ಪ್ರಭೆ–ಕಾಂತಿ, ಪ್ರಕಾಶ;
87. ನಿಂದಕರು– ನಿಂದಿಸುವವ, ಬಯ್ಯುವವ;
88. ಏಡಿಸಲು–ಛೇಡಿಸು, ಚೇಷ್ಟೆಮಾಡು;
89. ಕುತರ್ಕ–ನ್ಯಾಯವಿಲ್ಲದ ಮಾತು;
    ಪಥ–ಮಾರ್ಗ, ದಾರಿ;
90. ವ್ರತ–ನಿಯಮ, ಪೂಜೆ, ಧಾರ್ಮಿಕ ಅನುಷ್ಠಾನ;
91. ಬಟ್ಟೆ–ಮಾರ್ಗ, ದಾರಿ;
    ಪ್ರಮಥರು–ಶಿವನ ಭಕ್ತರು;
92. ಅಳಿಮನ–ದೃಢವಲ್ಲದ ಮನಸ್ಸು, ಅಸ್ಥಿರವಾದ ಮನಸ್ಸು;
93. ಅದ್ದಿ–ಮುಳುಗಿಸು, ತೋಯಿಸು;

## ದ್ವಿತಿಯ ಸೆಮಿಸ್ಟರ್

## 5. ಮೈಲಾರ ಮಹಾದೇವ

1. ಟೊಪ್ಪಿಗೆ–ಟೋಪಿ;
2. ಕಿತ್ತಿ ಬರತಾರ–ಕಿತ್ತು ಬರುತ್ತಾರೆ; ಉತ್ಸಾಹದಿಂದ ಬರುತ್ತಾರೆ;
3. ಚಿಕ್ಕವಯಸಿದ್ರು–ಚಿಕ್ಕ ವಯಸ್ಸಿದ್ದರೂ;
4. ಚೊಕ್ಕ–ಚೆನ್ನಾಗಿ, ಅಚ್ಚುಕಟ್ಟಾಗಿ;
5. ಚಂದ–ಚೆನ್ನ;
6. ಚೊಕ್ಕಬಂಗಾರ–ಅಪ್ಪಟ ಬಂಗಾರ, ಅಪರಂಜಿ;
7. ಧಕ್ಕೆ–ತೊಂದರೆ;
8. ಅಣಿಯಾಗು–ಸಿದ್ಧವಾಗು;
9. ಶೋಧ–ಹುಡುಕಾಟ;
10. ತುಕಡಿ–ಸೈನ್ಯ;
11. ಕಾಳಗ–ಯುದ್ಧ, ಹೋರಾಟ;
12. ಮಡು–ಕೊಳ್ಳ ;
13. ಕಾಲ್ತೆಗೆ– ಓಡಿಹೋಗು;
14. ದಿಟ್ಟತನ–ಧೈರ್ಯ;
15. ಖಜಾನೆ–ಬೊಕ್ಕಸ;
16. ಖಾದಿ–ಕೈನೂಲಿನಿಂದ ನೆಯ್ದುಬಟ್ಟೆ ;
17. ಓಟಕೀಳು – ಓಡಿಹೋಗು ;
18. ಗುನುಗು–ಸತತವಾಗಿ ಧ್ವನಿಮಾಡು ;
19. ಜೈಲು–ಸೆರೆಮನೆ, ಬಂಧೀಖಾನೆ;
20. ಬಲಿದಾನ –ಪ್ರಾಣತ್ಯಾಗ;

21. ಸೋಸಿದರು–ಅನುಭವಿಸಿದರು

## 6. ಚಗಳಿ ಇರುವೆ

22. ವರ್ಗ–ಗುಂಪು, ಸಮೂಹ;
23. ವರ್ಣನೆ–ಬಣ್ಣನೆ;
24. ಸಂಕೀರ್ಣ–ಜಟಿಲವಾದ, ನಾನಾ ವಿಧವಾದ;
25. ಅಂಚು–ಕೊನೆ, ತುದಿ;
26. ಸ್ರವಿಸು–ಒಸರು, ಜಿನುಗು;
27. ಬೆಸೆ–ಕೂಡಿಸು, ಸೇರಿಸು;
28. ಮಾಳಿಗೆ–ಮಹಡಿ;
29. ಹಿಮ್ಮೆಟ್ಟಿಸು–ಹಿಂದಕ್ಕೆ ಸರಿಸು, ಸೋಲಿಸು;
30. ಸಿಂಪರಿಸು–ಚಿಮುಕಿಸು, ಲೇಪಿಸು;
31. ಆಜುಬಾಜು–ಅಕ್ಕಪಕ್ಕ, ನೆರೆಹೊರೆ;
32. ಸನ್ನದ್ಧ–ಸಿದ್ಧವಾಗು;
33. ಉಚ್ಚಿಷ್ಠ–ಎಂಜಲು;
34. ಮಧು–ಸಿಹಿ;
35. ವಾಹಕ–ಸಾಗಿಸುವ;
36. ಒಸರು–ಜಿನುಗು

## 7. ಬಿಲ್ಲಹಬ್ಬ

37. ಬಿಸಿಲು ಮಚ್ಚು – ಬಿಸಿಲು ಮಾಳಿಗೆ ;
38. ಬಡಿಗೆ – ದೊಣ್ಣೆ, ಕೋಲು ;
39. ಪೋರ – ಹುಡುಗ;
40. ಗೂಢಚಾರ – ಗುಪ್ತಚರ ;
41. ಶೋಧ – ಹುಡುಕು ;
42. ಮಾಹಿತಿ – ತಿಳಿವಳಿಕೆ, ವಿವರಣೆ ;
43. ಲೋಕಾಭಿರಾಮ–ಸಹಜವಾಗಿ;
44. ಎಕ್ಕಡ – ಪಾದುಕೆ, ಪಾದರಕ್ಷೆ ;
45. ಪಾಶ – ಹಗ್ಗ ;
46. ಪರಾಂಬರಿಸು – ಗಮನಿಸು, ಪರಿಶೀಲಿಸು;
47. ಕ್ರೀಡಾಗಾರ – ಕ್ರೀಡಾಂಗಣ ;
48. ಹೆಬ್ಬಾಗಿಲು – ಮಹಾದ್ವಾರ ;
49. ಪಥ್ಯ – ಆಹಾರದ ಕಟ್ಟುಪಾಡು, ಯೋಗ್ಯವಾದುದು ;
50. ತಮಾಷೆ – ಹಾಸ್ಯ;
51. ಕೊಂಚ – ಸ್ವಲ್ಪ ;
52. ಘಟಿಂಗ – ತುಂಟ, ಭಂಡ ;
53. ತಾರಮ್ಮಯ್ಯ – ಅಂಗೈ ಆಡಿಸು ;
54. ವಾತಾಯನ–ಕಿಟಕಿ ;
55. ಕೂಸು – ಮಗು ;
56. ಹಾಲಾಹಲ – ವಿಷ ;
57. ಕ್ಷೀರ – ಹಾಲು;
58. ಮಥಿಸು – ಕಡೆ;
59. ಸಂಕೋಲೆ – ಸರಪಳಿ;
60. ಅಪರಂಜಿ – ಬಂಗಾರ;
61. ಯಾಗ– ಯಜ್ಞ;
62. ತೊಯ್ – ನೆನೆ, ಒದ್ದೆಯಾಗು;
63. ಸೆರೆಮನೆ – ಬಂದೀಖಾನೆ ;
64. ಪೀಡೆ – ತೊಂದರೆ;
65. ಬೊಗಳೆ–ಕೆಲಸಕ್ಕೆ ಬಾರದ

## 8. ಸಂಕ್ರಾಂತಿಯಂದು ಸುಖ ದುಃಖ

66. ಸಂಕ್ರಾಂತಿ–ದಾಟುವಿಕೆ, ಸೂರ್ಯನು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಹೋಗುವ ದಿನ;
67. ಕಿಚ್ಚು–ಬೆಂಕಿ;
68. 'ಟೂ' ಬಿಡು–ಮಾತುಬಿಡು;
69. ಪಟೇಲ–ಹಿಂದೆ ಊರಿನ ಕ್ಷೇಮಸಮಾಚಾರಗಳನ್ನು ನೋಡಿಕೊಳ್ಳುತ್ತಿದ್ದ ಹಿರಿಯ;
70. ಮೀಯು–ಸ್ನಾನ ಮಾಡು;
71. ತರಹೇವಾರಿ–ವಿಧವಿಧವಾದ;
72. ಬ್ಯುಸಿ–ಬಿಡುವಿಲ್ಲದಿರುವುದು (ಇಂಗ್ಲೀಷ್ ಪದ);
73. ಪ್ಯಾಕ್ ಮಾಡು–ಪೊಟ್ಟಣ ಕಟ್ಟು;
74. ರೆಡಿಮೇಡ್–ಸಿದ್ಧವಾದ;
75. ಫ್ಯಾಬ್ ಮಾಲ್–ಆಧುನಿಕ ಮಾರುಕಟ್ಟೆಯ ಒಂದು ರೂಪ

## 5. ಹಚ್ಚೇವು ಕನ್ನಡದ ದೀಪ

76. ಹಚ್ಚೇವು–ಹಚ್ಚುವೆವು;
77. ಕರುನಾಡು–ಕನ್ನಡನಾಡು;
78. ಕೊಚ್ಚೇವು– ಕತ್ತರಿಸುತ್ತೇವೆ;
79. ಸೂಸು–ಹರಡು, ಚಿಮುಕಿಸು;
80. ಕರಣ–ಒಡಲು, ಶರೀರ;
81. ಕಳೆ–ಕಾಂತಿ, ತೇಜಸ್ಸು, ಪ್ರಕಾಶ;
82. ಎರೆ–ಹೊಯ್ಯು;
83. ಹುರಿಗೊಳಿಸು–ಬಲಪಡಿಸು;
84. ಕೆಚ್ಚು–ಕೂಡುವಿಕೆ, ಬೆಸುಗೆ, ಸೇರಿಸು;
85. ಅಚ್ಚಳಿಯದೆ–ಅಂದಗೆಡದಂತೆ, ರೂಪುಗೆಡದಂತೆ;
86. ಒಂದುಗೂಡೇವು–ಒಂದಾಗಿ ಸೇರುತ್ತೇವೆ;
87. ತೀಡು–ಬೀಸು, ಹೊರಹೊಮ್ಮು;
88. ಮಾಂಗಲ್ಯಗೀತೆ– ಮಂಗಳಕರವಾದ ಹಾಡು;
89. ಮರುಳು– ಹುಚ್ಚು;
90. ಕಡೆ–ನಿವಾರಿಸು;
91. ಮೈಮರೆವು– ದೇಹದ ಅರಿವು ಇಲ್ಲವಾಗು, ಮೂರ್ಛೆ;
92. ಮಾತೆ–ತಾಯಿ, ಜನನಿ;
93. ಕೊಳೆ–ಹೊಲಸು;
94. ಕಂಪು–ಸುಗಂಧ, ಪರಿಮಳ;
95. ನಾಡು–ಜನವಸತಿಯುಳ್ಳ ಪ್ರದೇಶ, ರಾಜ್ಯ;
96. ಹಿಡಿ–ಗ್ರಹಿಸು, ಹಿಡಿದಿಟ್ಟುಕೊ;
97. ಹೊಸೆ–ಹುರಿ ಮಾಡು, ಹೆಣೆ:
98. ಹರಿವು–ಪ್ರವಹಿಸು, ಹರಿಯುವಿಕೆ;
99. ಬೀರು–ಹರಡು;
100. ಅಚ್ಚಳಿ–ಅಂದಕೆಡು;
101. ತೋರು– ಕಾಣುವಂತೆ ಮಾಡು;
102. ಒಡಲು–ಹೊಟ್ಟೆ; ತೂರು–ಎಸೆ.

## 6. ಬಿಡುಗಡೆಯ ಹಾಡು:

103. ಹಂಗು – ಋಣ, ಆಶ್ರಯ;
104. ಪಂಜರ – ಪಕ್ಷಿಗಳ ಬೋನು;
105. ಬಾನಾಡಿ – ಪಕ್ಷಿ;
106. ವಿಹರಿಸು– ಸಂಚರಿಸು;
107. ಹರ್ಷ – ಹಿಗ್ಗು, ಸಂತೋಷ;
108. ಸೊಕ್ಕಿ – ಗರ್ವ, ಜಂಭ;
109. ಕೊಳೆಗೊಂಡು –ಮಾಲಿನ್ಯಗೊಂಡು, ತೃಪ್ತಿಗೊಂಡು;
110. ತಣಿಸು – ತಂಪಾಗಿಸು, ತೃಪ್ತಿಗೊಳಿಸು;
111. ವಸನ – ವಸ್ತ್ರ, ಬಟ್ಟೆ;
112. ಹದ್ದು – ಎಲ್ಲೆ, ಗಡಿ;
113. ಕನಲು – ಕೋಪಗೊಳ್ಳು, ಸಿಟ್ಟಾಗು;
114. ಕೆಂಗಿಡಿ – ಉರಿಬೆಂಕಿ, ಕೆಂಪಾದ ಬೆಂಕಿ;
115. ಸದರೇರು – ಅಂಗಳ ಸೇರು, ಬಂದಮುಕ್ತವಾಗು;
116. ಸೆರೆ – ಬಂಧನ;
117. ಅಡಗು – ಕಾಣದಂತಾಗು;
118. ಕಾರಿರುಳು – ದಟ್ಟವಾದ ಕತ್ತಲೆ;
119. ಪಣ – ಒತ್ತೆಇಡು;
120. ತೊಲಗು – ಬಿಟ್ಟುಹೋಗು, ಹೊರಟುಹೋಗು;
121. ಗುಡಿ – ಬಾವುಟ, ಕೇತನ;
**122.** ಒಕ್ಕೊರಲು – ಒಗ್ಗಟ್ಟು,

## 7. ತಿರುಕನ ಕನಸು

123. ತಿರುಕ – ಭಿಕ್ಷುಕ;
124. ಮುರುಕು – ಪಾಳುಬಿದ್ದ, ಮುರಿದು ಬಿದ್ದ;
125. ಪುರ – ಪಟ್ಟಣ, ನಗರ;
126. ಕರಿ–ಆನೆ;
127. ಕುಸುಮಮಾಲೆ – ಹೂವಿನಮಾಲೆ.
128. ಧರ್ಮಶಾಲೆ–ಅನ್ನಛತ್ರ.
129. ತೊಡರಿಸು–ಧರಿಸು, ಹಾಕು;
130. ಪಟ್ಟ – ಸಿಂಹಾಸನ;
131. ಒಡಯ–ರಾಜ, ದೊರೆ
132. ಮಾಳಪೆವು–ಮಾಡುವೆವು;

133. ಒಡನೆ–ತಕ್ಷಣ;
134. ಪೊಡವಿ – ರಾಜ್ಯ;
135. ಆಣ್ಮ–ಒಡೆಯ, ರಾಜ
136. ಹಿಗ್ಗು – ಸಂತೋಷಪಡು, ಹರ್ಷಿಸು;
137. ನೃಪ–ರಾಜ, ದೊರೆ ;
138. ಭಟ್ಟಿನಿಗಳು – ಹೆಂಡತಿಯರು. ಪಟ್ಟಮಹಿಷಿಯಲ್ಲದ ರಾಣಿಯರು
139. ನಲ್ಲ – ಪ್ರಿಯತಮ
140. ಓಲಗ–ರಾಜಸಭೆ ;
141. ಲೀಲೆ–ವಿನೋದ, ವಿಲಾಸ ;
142. ಚಾತುರಂಗ – ಸೈನ್ಯದ ನಾಲ ಅಂಗಗಳು (ಆನೆ, ಕುದುರೆ, ರಥ, ಕಾಲಾಳಿನ ಬಲ)
143. ಲೋಲ – ಉತ್ಸುಕ, ಸಂತೋಷ
144. ಸುತ –ಮಗ ;
145. ಜೀಯ – ಸ್ವಾಮಿ, ಒಡೆಯ ;
146. ಸಕಲ – ಎಲ್ಲಾ ;
147. ಸಂಭ್ರಮ – ಹರ್ಷ, ಉಲ್ಲಾಸ ;
148. ಅಖಿಲ – ಸಕಲ, ಎಲ್ಲಾ ;
149. ರಾಯ–ರಾಜ, ಅರಸ ;
150. ಮೆಚ್ಚು–ಒಪ್ಪು, ಮೆಚ್ಚಿಕೊಳ್ಳು ;
151. ಅಂದದಿ – ರೀತಿಯಲ್ಲಿ ;
152. ಧನ – ಹಣ, ಸಂಪತ್ತು ;
153. ಮದ – ಗರ್ವ, ಅಹಂಕಾರ ;
154. ತನುಜ – ಮಗ ;
155. ಜನಿತ – ಹುಟ್ಟು, ಜನ್ಮತಾಳು ;
156. ಅನಿತರೊಳಗೆ–ಅಷ್ಟರಲ್ಲಿ ;
157. ದಂಡು – ಸೈನ್ಯ ;
158. ಮುತ್ತು–ಆವರಿಸು, ಸುತ್ತುವರಿ

## 8. ಅಭಿಮನ್ಯು ಪರಾಕ್ರಮ

159. ಜನಪ–ರಾಜ (ಇಲ್ಲಿ ಧರ್ಮರಾಯ);
160. ಅಂಘ್ರಿ–ಪಾದ; ಮಣಿ–ನಮಸ್ಕರಿಸು;
161. ಬೆಸಸು–ಅಪ್ಪಣೆಮಾಡು;
162. ಬೊಪ್ಪ–ತಂದೆ, (ಇಲ್ಲಿ ದೊಡ್ಡಪ್ಪ);
163. ಆಹವ–ಯುದ್ಧ;
164. ಭೇದನ–ಮುರಿಯುವುದು;
165. ಅನುವರ–ಯುದ್ಧ;
166. ಕೃತಾಂತ–ಯಮ;
167. ಅಹಿತರು–ಹಿತವಲ್ಲದವರು,ವೈರಿಗಳು;
168. ಕಾಳಗ–ಯುದ್ಧ.
169. ಹಸುಳೆ–ಮಗು;
170. ಅದಟು–ಪರಾಕ್ರಮ,ಶೌರ್ಯ;
171. ಘನ–ದೊಡ್ಡ;
172. ಶಿಶು–ಮಗು;
173. ಕಾದುವರು–ಯುದ್ಧ ಮಾಡುವವರು;
174. ಅಸಮಬಲ–ಸಮಾನವಲ್ಲದ ಶಕ್ತಿ ಉಳ್ಳವರು;
175. ಎಸುಗೆ–ಬಾಣ ಪ್ರಯೋಗ;
176. ಸೈರಿಸು–ತಡೆದುಕೊಳ್ಳು;
177. ಆಪೆ–ಸಮರ್ಥನಾಗುವೆ.
178. ತೊರೆ–ನದಿ, ಹೊಳೆ;
179. ಮರೀಚಿ–ಮೃಗಜಲ(ನೀರು ಎಂಬ ಭ್ರಮೆಯ ಸೃಷ್ಟಿ)
180. ಹರಿಗೋಲು–ನಾವೆ, ದೋಣಿ;
181. ಲೆಪ್ಪ–ವಿಗ್ರಹಗಳನ್ನು ಮಾಡಲು ಬಳಸುವ ಎರಕ;
182. ಉರಗ–ಹಾವು;
183. ಕೊಡನ ಮಗ– ದ್ರೋಣ;
184. ಕುಮಂತ್ರ–ಮೋಸದ ಆಲೋಚನೆ;
185. ದಂಡು–ಸೈನ್ಯ;
186. ಅಂಜು–ಹೆದರು;
187. ವೆಗ್ಗಳ–ಅತಿಯಾಗಿ;
188. ಅಮ್ಮೆ–ಸಾಧ್ಯವಿಲ್ಲ.
189. ವೈರಿ–ಶತ್ರು;
190. ವ್ಯೂಹ–ಸೈನ್ಯವನ್ನು ಒಂದು ವಿಶಿಷ್ಟ ರೀತಿಯಲ್ಲಿ ನಿಲ್ಲಿಸುವ ಕ್ರಮ;
191. ಅಸದ–ಅಸಾಧ್ಯ,ಅತಿಶಯ;
192. ಇಂದುಧರ–ಚಂದ್ರನನ್ನು ಧರಿಸಿರುವವ, ಶಿವ;
193. ಅಡಹಾಯ್ದರೂ–ಮೇಲೆ ಬಿದ್ದು ಬಂದರೂ;
194. ಸಮರ–ಯುದ್ಧ.
195. ಬೆಮರು–ಬೆವರು;
196. ವಹ್ನಿಜ್ವಾಲೆ–ಬೆಂಕಿಯ ಜ್ವಾಲೆ;
197. ಹಿಮ–ಚಳಿಗಾಲ, ಮಂಜಿನ ಹನಿ;
198. ಅಂಜು–ಹೆದರು;
199. ಮಂಜು–ಇಬ್ಬನಿ,
200. ಮೇಲುಗಾಳೆಗ–ಸ್ಪರ್ಧಾತ್ಮಕವಾದ ಯುದ್ಧ;
201. ದುಗುಡ–ಚಿಂತೆ, ಆತಂಕ;
202. ನಿಮ್ಮಡಿ ಆಲಿ–ನಿಮ್ಮ ಕಣ್ಣುಗಳಿಗೆ;
203. ಔತಣ–ವಿಶೇಷ ಭೋಜನ;
204. ಇಕ್ಕು–ಇಡು,ಬಡಿಸು;
205. ಒರಸಿ–ನಾಶಮಾಡಿ;
206. ರಿಪುಬಲ–ವೈರಿ ಸೈನ್ಯ.